ಸಂಪಾದಕರು: ರವಿಕುಮಾರ್ ಸಿ.ಹೆಚ್.

ಓದುಗರ ನೆಚ್ಚಿನ ಕನ್ನಡ ದಿನಪತ್ರಿಕೆ

# ಸೂರ್ಯ ಪ್ರಗತಿ

SURYAPRAGATHI Kannada Daily

ಪ್ರತಿ ಸುದ್ಧಿಯ ಧ್ವನಿ

suryapragathi2021@gmail.com Mob: 9901010109 RNI:KARKAN/2021/80805 L2/RNP-1285/TMR/2025-27

Volume: 05 Issue: 39
ಸಂಪುಟ: 05 ಸಂಚಿಕೆ: 39
Date: 17-02-2026 Tuesday
RNI NO : KARKAN/2021/80805
L2/RNP-1285/TMR/2025-27
Page :4
ಪುಟ : 4
Price: 1.00
ಬೆಲೆ: 1.00 ರೂ

## ಬೇಸಿಗೆ ಬರ; ಎಚ್ಚರ ವಹಿಸಲು ಉಸ್ತುವಾರಿ ಸಚಿವರ ಸೂಚನೆ



ತುಮಕೂರು : ಮುಂದಿನ ಬೇಸಿಗೆಯಲ್ಲಿ ಜಿಲ್ಲೆಯ ಯಾವುದೇ ಭಾಗದಲ್ಲಿ ಕುಡಿಯುವ ನೀರಿನ ಸಮಸ್ಯೆ ತಲೆದೋರದಂತೆ ಎಚ್ಚರ ವಹಿಸುವಂತೆ ಜಿಲ್ಲಾ ಉಸ್ತುವಾರಿ ಸಚಿವ ಡಾ.ಜಿ.ಪರಮೇಶ್ವರ ಅಧಿಕಾರಿಗಳಿಗೆ ಸ್ಪಷ್ಟ ಸೂಚನೆ ನೀಡಿದ್ದಾರೆ.

ಜಿಲ್ಲಾಧಿಕಾರಿ ಕಚೇರಿಯಲ್ಲಿ ಶುಕ್ರವಾರ ಪ್ರಗತಿ ಪರಿಶೀಲನಾ ಸಭೆ ನಡೆಸಿದ ಅವರು, ಕಳೆದ ವರ್ಷ ಜಿಲ್ಲೆಯಲ್ಲಿ ಉತ್ತಮ ಮಳೆಯಾಗಿದೆ, ಹೇಮಾವತಿ ನಾಲೆ ಸೇರಿದಂತೆ ವಿವಿಧ ಕಾರಣಗಳಿಂದ ಕೆರೆಗಳಲ್ಲಿ ನೀರು ಇದೆ. ಆದರೂ ಜೂನ್ ತಿಂಗಳ ನಂತರ ಜಿಲ್ಲೆಯಲ್ಲಿ ಮಳೆಯಾಗುವ ಸಾಧ್ಯತೆ ಇರುವುದರಿಂದ ಅಲ್ಲಿಯವರೆಗೆ ಜಿಲ್ಲೆಯ ಕೆಲ ಭಾಗದಲ್ಲಿ ಕುಡಿಯುವ ನೀರಿಗೆ ತತ್ವಾರ ಸಾಧ್ಯತೆ ಇದೆ. ಈ ಹಿನ್ನೆಲೆಯಲ್ಲಿ ಅಧಿಕಾರಿಗಳು ಯಾವುದೇ ಸಮಸ್ಯೆ ತಲೆದೋರದಂತೆ ಮುನ್ನೆಚ್ಚರಿಕೆ ಕ್ರಮ ವಹಿಸುವಂತೆ ಅವರು ಸೂಚಿಸಿದರು.

ಅಧಿಕಾರಿಗಳ ನಿಧಾನ ದೋರಣೆಯಿಂದ ನೀರು ಸಂಗ್ರಹಣೆ ಸಂಬಂಧಿತ ಕಾಮಗಾರಿಗಳು ವಿಳಂಭವಾಗಿವೆ ಎಂದು ಅಧಿಕಾರಿಗಳನ್ನು ತೀವ್ರ ತರಾಟೆಗೆ ತೆಗೆದಿಕೊಂಡ ಅವರು, ಸಾರ್ವಜನಿಕರಿಂದ ಸಮಸ್ಯೆ ಕೂಗು ಕೇಳಿಬಂದರೆ ತಮ್ಮನ್ನೆ ಹೊಣೆ ಮಾಡುವುದಾಗಿ ಸಚಿವರು ಎಚ್ಚರಿಕೆ ನೀಡಿದರು.

ನಗರ ಪ್ರದೇಶಗಳಲ್ಲಿ ಈಗಾಗಲೆ ಟ್ಯಾಂಕರ್ ನೀರು ಸರಬರಾಜು ಬಗ್ಗೆ ಮಾಹಿತಿ ತಿಳಿದ ತೀವ್ರ ಅಸಮಾಧಾನ ವ್ಯಕ್ತಪಡಿಸಿದ ಅವರು, ಇಲ್ಲಿವರೆಗೆ ನೀರು ಸಂಗ್ರಹಕ್ಕೆ ನಗರಾಡಳಿತ ಯಾವ ಕ್ರಮ ತೆಗೆದುಕೊಂಡಿದೆ, ನೀರು ಸಂಗ್ರಹಕ್ಕೆ ಯಾವುದೇ ಕ್ರಮ ಅನುಸರಿಸದ ಬಗ್ಗೆ ತೀವ್ರ ಅಸಮಾಧಾನ ವ್ಯಕ್ತಪಡಿಸಿದ ಅವರು, ಬೇಸಿಗೆ ಬಂದ ಕೂಡಲೆ ಟ್ಯಾಂಕರ್ ಸರಬರಾಜು ಎಂಬ ಉತ್ತರ ಬರುವುದು ಸಮಾಧಾನಕರವಲ್ಲ. ಇದಕ್ಕೆ ಸರಿಯಾದ ವ್ಯವಸ್ಥೆ ಮಾಡಿಕೊಳ್ಳಬೇಕು ಎಂದರು.

ನಗರ ಪ್ರದೇಶಗಳಿಗೆ ದಿನವೂ ಕುಡಿಯುವ ನೀರು ಸರಬರಾಜಾಗಲು ಕ್ರಮ ವಹಿಸುವಂತೆ ಸೂಚಿಸಿದರು.

ಬರುವ ಬೇಸಿಗೆ ದಿನಗಳಲ್ಲಿ ಗ್ರಾಮೀಣ ಪ್ರದೇಶಗಳಲ್ಲಿ ಹಬ್ಬ ಜಾತ್ರೆಗಳ ಆಗುತ್ತವೆ. ಈ ಸಂದರ್ಭದಲ್ಲಿ ಜನರ ಕ್ಷೇಮ ಕಾಳಜಿಗೆ ಯಾವ ಕ್ರಮ ಅನುಸರಿಸಿದ್ದೀರಿ ಎಂದು ಉಪ ವಿಭಾಗಾಧಿಕಾರಿಗಳನ್ನು ಪ್ರಶ್ನಿಸಿದ ಅವರು, ಯಾವುದೇ ಜಾತ್ರೆ ಹಬ್ಬ ಆಚರಿಸಲು ಸ್ಥಳಿಯ ಆಡಳಿತದ ಅನುಮತಿ ಕಡ್ಡಾಯವಾಗಿ ಪಡೆಯಬೇಕು. ಒಂದೊಮ್ಮೆ ಅನುಮತಿ ಇಲ್ಲದೆ ನಡೆದ ಜಾತ್ರೆ ಹಬ್ಬಗಳ ಸಂಬಂಧ ಆಗುವ ಸಮಸ್ಯೆಗಳಿಗೆ ಆಯ ಅಧಿಕಾರಿಗಳನ್ನೇ ಹೊಣೆ ಮಾಡುವುದಾಗಿ ಎಚ್ಚರಿಕೆ ನೀಡಿದರು.

ಜಿಲ್ಲೆಯಲ್ಲಿ ಪ್ರಗತಿಯಲ್ಲಿರುವ ಕಾಮಗಾರಿಗಳನ್ನು ತ್ವರಿತವಾಗಿ ಪೂರ್ಣಗೊಳಿಸುವಂತೆ ಸೂಚಿಸಿದ ಅವರು, ಪೂರ್ಣಗೊಂಡ ಕಾಮಗಾರಿಗಳ ಬಗ್ಗೆ ಮೇಲಧಿಕಾರಿಗಳಿಗೆ ತಕ್ಷಣ ಮಾಹಿತಿ ನೀಡಬೇಕು ಹಾಗೂ ವಿಳಂಬ ನೀತಿಯನ್ನು ಸಹಿಸಲಾಗುವುದಿಲ್ಲ ಎಂದು ಅವರು ಸೂಚಿಸಿದರು.

ಸಭೆಯಲ್ಲಿ ಜಿಲ್ಲಾಧಿಕಾರಿ ಶುಭ ಕಲ್ಯಾಣ್, ಜಿಲ್ಲಾ ಪಂಚಾಯ್ತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಬಿ.ವಿ.ಅಶ್ವಿಜ, ಜಿಲ್ಲಾ ಪೊಲೀಸ್ ಅಧೀಕ್ಷಕ ಕೆ.ವಿ.ಅಶೋಕ್, ಅಪರ ಜಿಲ್ಲಾಧಿಕಾರಿ ಡಾ.ಎನ್.ತಿಪ್ಪೇಸ್ವಾಮಿ ಸೇರಿದಂತೆ ಎಲ್ಲ ಅಧಿಕಾರಿಗಳು ಉಪಸ್ಥಿತರಿದ್ದರು.

## ಅಧಿಕಾರಿಗಳು ಬೆಳೆದು ನಿಂತಿದ್ದಾರೆ.. !!
### ಕೇಂದ್ರ ಸಚಿವ ವಿ.ಸೋಮಣ್ಣ ಗರಂ



ಗುಬ್ಬಿ: ತಾಲ್ಲೂಕಿನ ಕಳ್ಳಿಪಾಳ್ಯ ಗ್ರಾಮದ ಬಳಿ ಬಾಕ್ಸ್ ಚರಂಡಿ ನಿರ್ಮಾಣಕ್ಕೆ ಗ್ರಾಮಸ್ಥರ ಬೇಡಿಕೆಗೆ ಉತ್ತರಿಸಿದ ವಿ.ಸೋಮಣ್ಣ ಅಧಿಕಾರಿಗಳು ಬೆಳೆದು ನಿಂತಿದ್ದಾರೆ. ಕೆಲಸ ಮಾಡಿಸುವುದು ಕಷ್ಟವಾಗುತ್ತಿದೆ. ಎಲ್ಲರಿಗೂ ಬೈಯುತ್ತಲೇ ಕೆಲಸ ಮಾಡಿಸುವ ಸ್ಥಿತಿ ಎದುರಾಗಿದೆ ಎಂದು ಕೇಂದ್ರದ ರೈಲ್ವೆ ಸಚಿವ ವಿ.ಸೋಮಣ್ಣ ತಮ್ಮ ಅಸಹಾಯಕತೆ ವ್ಯಕ್ತಪಡಿಸಿದರು. ಅನ್ಯ ಕಾರ್ಯಕ್ರಮಕ್ಕೆ ತೆರಳುವ ಮಾರ್ಗಮಧ್ಯೆ ಕಳ್ಳಿಪಾಳ್ಯ ಗೇಟ್ ಬಳಿ ನಿಂತಿದ್ದ ಮೈತ್ರಿ ಕಾರ್ಯಕರ್ತರು ಹಾಗೂ ಗ್ರಾಮಸ್ಥರೊಟ್ಟಿಗೆ ಮಾತನಾಡಿದ ಸಚಿವರು ನನ್ನ ಜವಾಬ್ದಾರಿಯ ಎಲ್ಲಾ ಕೆಲಸವನ್ನು ಮಾಡುತ್ತೇನೆ. ಆದರೆ ಅಧಿಕಾರಿಗಳ ಸಹಕಾರ ಸೂಕ್ತವಾಗಿ ಸಿಗುವುದಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಬಾಕ್ಸ್ ಚರಂಡಿ ಹಾಗೂ ರೈಲ್ವೆ ಅಂಡರ್ ಪಾಸ್ ನಿರ್ಮಾಣಕ್ಕೆ ಜೆಡಿಎಸ್ ಮುಖಂಡ ಕಳ್ಳಿಪಾಳ್ಯ ಲೋಕೇಶ್ ಒತ್ತಡ ಹೇರಿದಾಗ ಕಾರ್ಯಕರ್ತ ಸೋಮಶೇಖರ್ ನಮ್ಮ ಕೆಲಸ ಮಾಡಬೇಕು ನೀವು. ನಿಮಗೆ ಹೆಚ್ಚಿನ ಮತ ಹಾಕಿದ್ದೇವೆ ಎಂದರು. ತಕ್ಷಣ ಸಚಿವರು ಗೆಲ್ಲಿಸಿದ್ದು ನೀವೇ, ಯಾರು ನಿಂತಿದ್ದರೂ ಗೆಲ್ಲುತ್ತಿದ್ದರು ಎಂದರು. ಮರುಕ್ಷಣವೇ ಉತ್ತರಿಸಿದ ಕಾರ್ಯಕರ್ತ ಸೋಮಶೇಖರ್ ಹಾಗೇನೂ ಹೇಳಬೇಡಿ, ದೇವೇಗೌಡರ ಮುಖ ನೋಡಿ ನಿಮ್ಮನ್ನು ಹೆಚ್ಚಿನ ಅಂತರದಲ್ಲಿ ಗೆಲ್ಲಿಸಿದ್ದೇವೆ ಎಂದರು. ತಕ್ಷಣ ನಸುನಕ್ಕು ಸಚಿವರು ಎಲ್ಲಾ ಕೆಲಸ ಮಾಡಿಕೊಡುತ್ತೇವೆ ಎಂದು ಹೇಳಿ ಮುಂದಿನ ಕಾರ್ಯಕ್ರಮದತ್ತ ಸಾಗಿದರು.

## ಎಸ್‌ಪಿ NEWS ಸಣ್ ಸುದ್ದಿ



ತುಮಕೂರಿನ ಮರಳೂರು ರಿಂಗ್ ರಸ್ತೆಯ ಸರ್ಕಲ್‌ನಲ್ಲಿ ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿಯವರನ್ನು ಜೆಡಿಎಸ್ ಜಿಲ್ಲಾಧ್ಯಕ್ಷ ಹೆಚ್. ನಿಂಗಪ್ಪ ಅಭಿನಂದಿಸಿದರು. ಮುಖಂಡರುಗಳಾದ ಟಿ.ಆರ್. ನಾಗರಾಜು, ಪಾಲಿಕೆ ಮಾಜಿ ಸದಸ್ಯ ಧರಣೇಂದ್ರಕುಮಾರ್, ನಾಗವಲ್ಲಿ ರಾಮಣ್ಣ, ಗೂಳೂರು ನವೀನ್, ಕೊಂಡವಾಡಿ ಚಂದ್ರಶೇಖರ್, ಜೆಸಿಬಿ ರಾಜಣ್ಣ, ಮಂಜುನಾಥ್, ಯೋಗಾನಂದ್ ಮತ್ತಿತರರು ಚಿತ್ರದಲ್ಲಿದ್ದಾರೆ.



ತುಮಕೂರಿನಲ್ಲಿ ಬಿಜೆಪಿ ರಾಜ್ಯ ರೈತ ಮೋರ್ಚಾ ಉಪಾಧ್ಯಕ್ಷ ಬ್ಯಾಟರಂಗೇಗೌಡ ಅವರ ನಿವಾಸಕ್ಕೆ ಭೇಟಿ ನೀಡಿದ ಕೇಂದ್ರ ಸಚಿವ ವಿ. ಸೋಮಣ್ಣ ರವರನ್ನು ಅಭಿನಂದಿಸಲಾಯಿತು. ಶಾಸಕರುಗಳಾದ ಸುರೇಶ್‌ಗೌಡ, ಜ್ಯೋತಿಗಣೇಶ್, ಜಿಲ್ಲಾ ಬಿಜೆಪಿ ಅಧ್ಯಕ್ಷ ರವಿಹೆಬ್ಬಾಕ, ಜೆಡಿಎಸ್ ಜಿಲ್ಲಾಧ್ಯಕ್ಷ ಹೆಚ್. ನಿಂಗಪ್ಪ, ಸುಮಲತಾ ಬ್ಯಾಟರಂಗೇಗೌಡ ಹಾಗೂ ಬಿಜೆಪಿ–ಜೆಡಿಎಸ್ ಮುಖಂಡರು ಭಾಗವಹಿಸಿದ್ದರ



ತುಮಕೂರಿನ ಸಿದ್ದಗಂಗೆಯಲ್ಲಿ ನಡೆದ ಶ್ರೀ ಸಿದ್ದಲಿಂಗೇಶ್ವರ ಸ್ವಾಮಿ ರಥೋತ್ಸವದ ಸಿದ್ದಲಿಂಗಶ್ರೀ ಗಳು, ಶಾಸಕ ಜ್ಯೋತಿಗಣೇಶ್, ಜಿಲ್ಲಾಧಿಕಾರಿ ಶುಭಕಲ್ಯಾಣ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅಶೋಕ್ ಕೆ.ವಿ., ಉಪವಿಭಾಗಾಧಿಕಾರಿ ನಹೀದಾ ಜಮ್ ಜಮ್, ವಿವಿಧ ಮಠಾಧೀಶರುಗಳು ಸೇರಿದಂತೆ ಅನೇಕ ಗಣ್ಯರು ಭಾಗಿ

## ರೈತರ ಹಿತಕ್ಕೆ ಅಮೇರಿಕ ಒಪ್ಪಂದ ಮಾಡಿರುವುದು : ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ

ವರದಿ ಗುಬ್ಬಿ ಭರತ್

ಗುಬ್ಬಿ: ರೈತ ಪರ ಆಲೋಚನೆ ಮಾಡದ ರಾಹುಲ್ ಗಾಂಧಿ ಬರೀ ಟೀಕೆ ಮಾಡುವುದನ್ನ ಬಿಟ್ಟರೆ ಬೇರೇನೂ ಕೆಲಸವೇ ಗೊತ್ತಿಲ್ಲ ಎಂದು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ನೇರವಾಗಿ ಕಿಡಿಕಾರಿದರು. ತಾಲ್ಲೂಕಿನ ಕಳ್ಳಿಪಾಳ್ಯ ಗೇಟ್ ಬಳಿ ಜೆಡಿಎಸ್ ಕಾರ್ಯಕರ್ತರನ್ನು ಭೇಟಿ ಸಂದರ್ಭದಲ್ಲಿ ಸುದ್ದಿಗಾರರ ಜೊತೆ ಮಾತನಾಡಿದ ಅವರು ರೈತ ಪರ ಕೆಲಸಗಳನ್ನು ಎಂದೂ ಮಾಡಿಲ್ಲ. ವಿಷಯವಂತೂ ಮೊದಲೇ ತಿಳಿಯಲ್ಲ, ಯಾರೋ ಹೇಳುತ್ತಾರೆ ರಾಹುಲ್ ಗಾಂಧಿ ಅವರು ಮಾತನಾಡುತ್ತಾರೆ ಅಷ್ಟೇ ಎಂದು ವ್ಯಂಗ್ಯವಾಡಿದ ಅವರು ಕೇಂದ್ರ ಸರ್ಕಾರದಿಂದ



ಬರುವ ಅನುದಾನಗಳನ್ನು ರೈತರ ಪರವಾಗಿ ನಿಂತು ಸರಿಯಾಗಿ ಉಪಯೋಗ ಮಾಡಿಕೊಳ್ಳದ ರಾಜ್ಯದ ಕಾಂಗ್ರೆಸ್ ಸರ್ಕಾರ ಕೇಂದ್ರ ಸರ್ಕಾರವನ್ನು ಟೀಕಿಸುವ ಯಾವ ನೈತಿಕತೆ ಉಳಿಸಿಕೊಂಡಿಲ್ಲ ಎಂದರು.

ರೈತರ ಹಿತ ಕಾಯಲು ಅಮೆರಿಕಾ ಜೊತೆ ವ್ಯಾಪಾರ ಒಪ್ಪಂದ ಮಾಡಿಕೊಂಡಿರುವುದು. ದೇಶಕ್ಕೆ ರೈತರನ್ನ ಏನು ಮಾರಾಟ ಮಾಡುತ್ತಿದ್ದಾರೆಯೇ.? ನಮಗೆ ಅಷ್ಟು ತಲೆಯಲ್ಲಿ ಬುದ್ಧಿ ಇಲ್ಲವೇ.? ಆ ರೀತಿ ಏನಾದರೂ ಇದ್ದರೆ ನಾವೇ ಈ ಒಪ್ಪಂದವನ್ನು ವಿರೋಧ ಮಾಡುತ್ತಿದ್ದೆವು ಎಂದು ತಿರುಗೇಟು ನೀಡಿದ ಅವರು ದೇಶದ ರೈತರು ಬೆಳೆಯುವ ಎಲ್ಲಾ ಬೆಳೆಗಳಿಗೆ ಎಲ್ಲಾ ರೀತಿಯಲ್ಲಿಯೂ ಈ ಒಪ್ಪಂದದಿಂದ ಅನುಕೂಲ ಆಗಲಿದೆ. ಈ ನಿಟ್ಟಿನಲ್ಲಿಯೇ ಎಲ್ಲಾ ಆಗುಹೋಗುಗಳ ಲೆಕ್ಕಾಚಾರ ಮಾಡಿ ಪ್ರಧಾನಿ ಮೋದಿ ಅವರು ಈ ಒಪ್ಪಂದದ ಬಗ್ಗೆ ತೀರ್ಮಾನ ಮಾಡಿದ್ದಾರೆ ಎಂದರು.

ನಂತರ ಸ್ಥಳೀಯ ಸ್ನಾತಕೋತ್ತರ ಪದವಿ ಪಡೆದ ಯುವತಿಯೊಬ್ಬಳ ಅರ್ಜಿ ಸ್ವೀಕರಿಸಿ ಸೂಕ್ತ ಉದ್ಯೋಗ ಒದಗಿಸುವ ಭರವಸೆ ನೀಡಿದರು.

ಈ ಸಂದರ್ಭದಲ್ಲಿ ಜೆಡಿಎಸ್ ಮುಖಂಡರಾದ ಬಿ.ಎಸ್.ನಾಗರಾಜು, ಕಳ್ಳಿಪಾಳ್ಯ ಲೋಕೇಶ್, ಜಿ.ಎನ್.ಬೆಟ್ಟಸ್ವಾಮಿ, ಯೋಗಾನಂದಕುಮಾರ್, ಜಿ.ಡಿ.ಸುರೇಶಗೌಡ, ಕಾರ್ಯಕರ್ತರಾದ ಸೋಮಶೇಖರ್, ಕಾಂತರಾಜ್, ಡಿ.ರಘು, ಶಿವಾನಂದ್, ವೆಂಕಟೇಶ್ ಇತರರು ಇದ್ದರು.

## ಸಹಸ್ರಾರು ಭಕ್ತರ ಸಮ್ಮುಖದಲ್ಲಿ ವೈಭವದ ಸಿದ್ದಲಿಂಗೇಶ್ವರಸ್ವಾಮಿ ರಥೋತ್ಸವ

ತುಮಕೂರು– ಐತಿಹಾಸಿಕ ಪ್ರಸಿದ್ದ ಸಿದ್ದಗಂಗೆಯಲ್ಲಿ ಶ್ರೀ ಸಿದ್ದಲಿಂಗೇಶ್ವರ ಸ್ವಾಮಿಯ ಮಹಾರಥೋತ್ಸವ ವಿವಿಧ ಧಾರ್ಮಿಕ ವಿಧಿ ವಿಧಾನಗಳೊಂದಿಗೆ ಸಹಸ್ರಾರು ಭಕ್ತರ ಸಮ್ಮುಖದಲ್ಲಿ ಅತ್ಯಂತ ವಿಜೃಂಭಣೆಯಿಂದ ನಡೆಯಿತು. ಶ್ರೀಕ್ಷೇತ್ರ ಸಿದ್ದಗಂಗೆಯ ಆರಾಧ್ಯದೈವ ಶ್ರೀ ಸಿದ್ದಲಿಂಗೇಶ್ವರ ಸ್ವಾಮಿಯ ರಥೋತ್ಸವಕ್ಕೆ ಮಠಾಧ್ಯಕ್ಷರಾದ ಶ್ರೀ ಸಿದ್ದಲಿಂಗ ಸ್ವಾಮೀಜಿ ಅವರು ಸೋಮವಾರ ಮಧ್ಯಾಹ್ನ 12ಕ್ಕೆ ಸರಿಯಾಗಿ ಶುಭ ಅಭಿಜಿನ್ ಲಗ್ನದಲ್ಲಿ ರಥದ ಗಾ ಲಿಗೆ ತೆಂಗಿನಕಾಯಿ ಒಡೆದು ಹಾಗೂ ಶ್ರೀಸ್ವಾಮಿಗೆ ಪುಷ್ಪಾರ್ಚನೆ ಸಲ್ಲಿಸುವ ಮೂಲಕ ವಿದ್ಯುಕ್ತ ಚಾಲನೆ ನೀಡಿದರು.

ರಥೋತ್ಸವದಲ್ಲಿ ಶ್ರೀಕ್ಷೇತ್ರದ ಕಿರಿಯ ಶ್ರೀಗಳಾದ ಶ್ರೀ ಶಿವಸಿದ್ದೇಶ್ವರ ಸ್ವಾಮೀಜಿ, ಶಾಸಕ ಜ್ಯೋತಿಗಣೇಶ್, ಜಿಲ್ಲಾಧಿಕಾರಿ ಶುಭಕಲ್ಯಾಣ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅಶೋಕ್ ಕೆ.ವಿ., ಉಪವಿಭಾಗಾಧಿಕಾರಿ ನಹೀದಾ ಜಮ್ ಜಮ್, ಪಾಲಿಕೆ ಆಯುಕ್ತೆ ಶುಭ, ವಿವಿಧ ಮಠಾಧೀಶರುಗಳು ಸೇರಿದಂತೆ ಅನೇಕ ಗಣ್ಯರು, ಸಹಸ್ರಾರು ಭಕ್ತಾದಿಗಳು ಪಾಲ್ಗೊಂಡು ರಥವನ್ನು ಮುಂದಕ್ಕೆ ಎಳೆದು ಭಕ್ತಿ ಸಮರ್ಪಿಸಿದರು. ಇದಕ್ಕೂ ಮುನ್ನ ರಥಕ್ಕೆ ಗಣಪತಿ ಪೂಜೆ, ಸ್ವಸ್ತಿ ಪುಣ್ಯಾಃ, ಕಳಸಗಳ ಆರಾಧನೆ, ರಥಾಂಗ ಪೂಜೆ ಸೇರಿದಂತೆ ವಿವಿಧ ಪೂಜೆ ಸಲ್ಲಿಸಿ



ಶ್ರೀಕ್ಷೇತ್ರದ ಆರಾಧ್ಯ ದೈವ ಸಿದ್ದಲಿಂಗೇಶ್ವರಸ್ವಾಮಿಯನ್ನು ರಥಕ್ಕೆ ಕೂರಿಸಿ ರಾಜೋಪಚಾರ ಮತ್ತು ಅಷ್ಟೋತ್ತರ ಪೂಜೆ ನೆರವೇರಿಸಲಾಯಿತು. ರಥದ ಮುಂಭಾಗದಲ್ಲಿ ಜಯಾದಿ ಹೋಮ, ಗಣ ಹೋಮ, ಮೃತ್ಯುಂಜಯ ಹೋಮ ಸಹ ಮಾಡಲಾಯಿತು.

ರಥವನ್ನು ಅಭೂತಪೂರ್ಣ ವಸ್ತ್ರಗಳಿಂದ ಸುವರ್ಣ ಕಲಶಗಳಿಂದ ಧಾರ್ಮಿಕ ಲಾಂಛನಗಳಾದ ಮಕರ, ತೋರಣ, ಕಲಶ, ಕನ್ನಡಿ ವಿವಿಧ ಬಗೆಯ ಪುಷ್ಪ ಮಾಲೆಗಳಿಂದ ಅಲಂಕರಿಸಲಾಗಿತ್ತು.

ರಥ ಸಾಗಿದ ದಾರಿಯುದ್ದಕ್ಕೂ ನಂದಿಧ್ವಜ, ಕರಡಿ ಮಜಲು, ನಾಗಸ್ವರ, ವೀರಗಾಸೆ, ಪಟಕುಣಿತ, ಡೋಲು ಕುಣಿತ ಸೇರಿದಂತೆ ವಿವಿಧ ಜಾನಪದ ಕಲಾ ತಂಡಗಳ ಪ್ರದರ್ಶನ ನೆರೆದಿದ್ದ ಭಕ್ತ ಸಮೂಹವನ್ನು ಆಕರ್ಷಿಸಿದವು. ನಾಡಿನ ವಿವಿಧೆಡೆಯಿಂದ ಆಗಮಿಸಿದ್ದ ಸಾವಿರಾರು ಭಕ್ತರು ಸುಡು ಬಿಸಿಲನ್ನೂ ಲೆಕ್ಕಿಸದೆ ರಥೋತ್ಸವದಲ್ಲಿ ಭಾಗವಹಿಸಿ ತಮ್ಮ ಇಷ್ಟಾರ್ಥ ಸಿದ್ದಿಗಾಗಿ ಮಾಡಿಕೊಂಡಿದ್ದ ಹರಕೆ ತೀರಿಸಲು ರಥಕ್ಕೆ ಬಾಳೆಹಣ್ಣು, ಹೂವು, ದವನ ಎಸೆದು ಭಕ್ತಿ ಸಮರ್ಪಿಸಿದರು.ಶಿವರಾತ್ರಿ ಪ್ರಯುಕ್ತ ಜಾಗರಣೆಗಾಗಿ ನಾಡಿನಾದ್ಯಂತ ಸಹಸ್ರಾರು ಭಕ್ತಾದಿಗಳು ರಾತ್ರಿಯೇ ಶ್ರೀಮಠಕ್ಕೆ ಆಗಮಿಸಿದ್ದು ಇಂದು ನಡೆದ ರಥೋತ್ಸವದಲ್ಲಿ ಪಾಲ್ಗೊಂಡು ಪುನೀತರಾದರು.

ಶ್ರೀಕ್ಷೇತ್ರದಲ್ಲಿಂದು ಸುಡುವ ಬಿಸಿಲನ್ನೂ ಲೆಕ್ಕಿಸದೆ ಭಕ್ತಾದಿಗಳು ಶ್ರೀಮಠದ ಶಾಲಾ ಕಟ್ಟಡಗಳ ಮೇಲೆ ಹತ್ತಿ ರಥೋತ್ಸವವನ್ನು ವೀಕ್ಷಿಸುತ್ತಿದ್ದ ದೃಶ್ಯ ಸಾಮಾನ್ಯವಾಗಿತ್ತು. ರಥೋತ್ಸವದ ಪ್ರಯುಕ್ತ ಭಕ್ತಾದಿಗಳಿಗೆ ಹಲವು ಸಂಘ ಸಂಸ್ಥೆಗಳಿಂದ ಪಾನಕ, ಮಜ್ಜಿಗೆ, ಹೆಸರು ಬೇಳೆಯನ್ನು ವಿತರಿಸಲಾಯಿತು. ರಥೋತ್ಸವದಲ್ಲಿ ನಾಡಿನ ವಿವಿಧೆಡೆಯಿಂದ ಪಾಲ್ಗೊಂಡಿದ್ದ ಸಹಸ್ರಾರು ಮಂದಿ ಭಕ್ತಾದಿಗಳಿಗೆ ವಿಶೇಷ ಪ್ರಸಾದ, ದಾಸೋಹ ವ್ಯವಸ್ಥೆ ಮಾಡಲಾಗಿತ್ತು.

ರಥೋತ್ಸವದಲ್ಲಿ ಸಿದ್ದಗಂಗಾ ಆಸ್ಪತ್ರೆಯ ನಿರ್ದೇಶಕ ಡಾ. ಎಸ್. ಪರಮೇಶ್ ಸೇರಿದಂತೆ ನಾಡಿನ ವಿವಿಧೆಡೆಗಳಿಂದ ಸಹಸ್ರಾರು ಮಂದಿ ಭಕ್ತಾದಿಗಳು ಪಾಲ್ಗೊಂಡಿದ್ದರು.

ಸೂರ್ಯ ಪ್ರಗತಿ ಕನ್ನಡ ದಿನ ಪತ್ರಿಕೆ
ಜಾಹೀರಾತಿಗಾಗಿ ಸಂಪರ್ಕಿಸಿ: 9901010109

## ಬೈಕ್ ನಿಲ್ಲಿಸಿದ್ದಕ್ಕೆ ಆರು ಜನರ ತಲೆಗೆ ಗಂಭೀರ ಪೆಟ್ಟು..!! : ಕ್ಷುಲ್ಲಕ ಕಾರಣಕ್ಕೆ ಹರಿದ ರಕ್ತ

ವರದಿ: ಗುಬ್ಬಿ ಭರತ್

ಗುಬ್ಬಿ: ರಸ್ತೆ ಬದಿ ಬೈಕ್ ನಿಲ್ಲಿಸಿದ್ದ ವಿಚಾರವನ್ನು ಮುಂದಿಟ್ಟು ಒಂದೇ ಕುಟುಂಬದ ಆರು ಮಂದಿಯ ಮೇಲೆ ಮತ್ತೊಂದು ಕುಟುಂಬದ ಎಂಟು ಮಂದಿ ಏಕಾಏಕಿ ಮಾರಕಾಸ್ತ್ರಗಳೊಂದಿಗೆ ಅಟ್ಯಾಕ್ ಮಾಡಿ ಆರು ಜನರ ತಲೆಗೆ ಹೊಡೆದು ರಕ್ತದ ಕೋಡಿ ಹರಿದ ಭೀಕರ ಘಟನೆ ತಾಲ್ಲೂಕಿನ ಕಸಬ ಹೋಬಳಿ ಅಮ್ಮನಘಟ್ಟ ಗ್ರಾಮದಲ್ಲಿ ನಡೆದಿದೆ. ಅಮ್ಮನಘಟ್ಟ ಗ್ರಾಮದ ಮಾರುತಿನಗರ ಬಡಾವಣೆಯ ನಿವಾಸಿಗಳಾದ ಹನುಮಂತಯ್ಯ, ದಿಲೀಪ್, ಜಯಮ್ಮ, ವೆಂಕಟೇಶ್, ಜಯಮ್ಮ ಮತ್ತು ಪದ್ಮ ಈ ಆರು ಮಂದಿ ತೀವ್ರ ರಕ್ತಸ್ರಾವದಿಂದ ಗುಬ್ಬಿ ಸರ್ಕಾರಿ





ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಈ ಪೈಕಿ ದಿಲೀಪ್ ಅವರ ಕೈ ಮೂಳೆ ಮುರಿತವಾಗಿದೆ. ಉಳಿದ ಐದು ಮಂದಿ ಅಸ್ವಸ್ಥರಾಗಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಸಂಜೆ ವೇಳೆ ದಿಲೀಪ್ ತನ್ನ ಬೈಕ್ ನಲ್ಲಿ ಗುಬ್ಬಿಯಿಂದ ಬಂದು ಮನೆ ಮುಂದೆ ನಿಲ್ಲಿಸಿದ್ದ ವಿಚಾರಕ್ಕೆ ಏಕಾಏಕಿ ಅಶ್ಲೀಲ ಪದಗಳಿಂದ ಬೈಗುಳ ಆರಂಭಿಸಿ ಸ್ಥಳದಲ್ಲಿದ್ದ ದೊಣ್ಣೆ, ಗಳಗಳು, ಗುದ್ದಲಿ ಹಿಡಿದು ಅಟ್ಯಾಕ್ ಮಾಡಿದ್ದರು. ಬೈಕ್ ತೆಗೆಯುವಷ್ಟರಲ್ಲಿ ಜಗಳ ತೆಗೆದು ಮಾರಣಾಂತಿಕವಾಗಿ ಹೊಡೆದಿದ್ದಾರೆ. ಹಳೇ ವೈಷಮ್ಯ ಹಿನ್ನಲೆ ಪೂರ್ವನಿಯೋಜಿತವಾಗಿ ಸಜ್ಜಾಗಿ ನಮ್ಮ ಮೇಲೆ ದಾಳಿ ಮಾಡಿದ್ದಾರೆ ಎಂದು ಗಾಯಾಳು ದಿಲೀಪ್ ನೇರ ಆರೋಪ ಮಾಡಿದರು.



ಗುಬ್ಬಿ ಸರ್ಕಾರಿ ಆಸ್ಪತ್ರೆಗೆ ಗುಬ್ಬಿ ಪೊಲೀಸರು ಭೇಟಿ ನೀಡಿ ಮುಂದಿನ ತನಿಖೆ ನಡೆಸಿದ್ದಾರೆ. ಹಲ್ಲೆ ಮಾಡಿದ ಯುವರಾಜ್, ಸಂಜಯ್, ಮಂಜಮ್ಮ, ರವೀಶ್, ಹೇಮಂತ್, ಶಾಂತರಾಜು, ಲಕ್ಷ್ಮಮ್ಮ, ಮೂಡಲಗಿರಿ ಇವರ ಮೇಲೆ ಪ್ರಕರಣ ದಾಖಲಿಸಲು ಮುಂದಿನ ಕ್ರಮ ಕೈಗೊಂಡರು.




ಮಹಾ ಶಿವರಾತ್ರಿ ಹಬ್ಬದ ಪ್ರಯುಕ್ತತುಮಕೂರಿನ ಹಿರೇಮಠದಲ್ಲಿ ಡಾ.ಶಿವಾನಂದ ಶಿವಾಚಾರ್ಯರ ನೇತೃತ್ವದಲ್ಲಿಮಲ್ಲಿಕಾಜ ರ್ುನಸ್ವಾಮಿಗೆ ವಿಶೇಷ ಅಭಿಷೇಕ, ಪೂಜೆ, ಶಿವನಾಮಸ್ಮರಣೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.ಮಠದಆವರಣದಲ್ಲಿ ಶಿವಲಿಂಗ ಪ್ರತಿಷ್ಠಾಪಿಸಿ ಪೂಜಿಸಲಾಯಿತು.ಸಾವಿರಾರು ಭಕ್ತರು ಮಠಕ್ಕೆ ಭೇಟಿ ನೀಡಿದೇವರದರ್ಶನ ಪಡೆದು ಪೂಜೆ ಸಲ್ಲಿಸಿ ಸ್ವಾಮೀಜಿಗಳ ಆಶೀರ್ವಾದ ಪಡೆದರು. ವೀರಶೈವ ಸಮಾಜದ ನಿರ್ದೇಶಕ ಅವಲಕ್ಕಿ ಸೂರಿ, ಮುಖಂಡ ಬಾವಿಕಟ್ಟೆಗಣೇಶ್ ಮೊದಲಾದವರು ಪೂಜಾಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದರು.

# ಲಾಭದ ಮೇಲೆ ಗಮನ ಬೇಡ, ಗುಣಮಟ್ಟ ನೋಡಿ

## ಅಭಿವೃದ್ಧಿ ಹೊಂದಿದ ಭಾರತಕ್ಕೆ ಖಾಸಗಿ ವಲಯ ನಿರ್ಣಾಯಕ: ಪ್ರಧಾನಿ ಮೋದಿ

ಪ್ರಧಾನಿ ಮೋದಿ ಖಾಸಗಿ ವಲಯಕ್ಕೆ ಗುಣಮಟ್ಟಕ್ಕೆ ಆದ್ಯತೆ ನೀಡುವಂತೆ ಕರೆ ನೀಡಿದ್ದಾರೆ. ಲಾಭದ ಬದಲು ಗುಣಮಟ್ಟದ ಮೇಲೆ ಗಮನಹರಿಸಿದರೆ ಅಭಿವೃದ್ಧಿ ಹೊಂದಿದ ಭಾರತದ (ವಿಕಸಿತ ಭಾರತ) ನಿರ್ಮಾಣ ಸಾಧ್ಯ. ಹಿಂದಿನ ಸರ್ಕಾರಗಳ ನಿರ್ಲಕ್ಷ್ಯದ ನಡುವೆಯೂ 'ಮೇಕ್ ಇನ್ ಇಂಡಿಯಾ' ಮೂಲಕ ಉತ್ಪಾದನಾ ವಲಯ ಬಲಗೊಂಡಿದೆ. ಮಹಿಳಾ ಸಬಲೀಕರಣ, ಎಂಎಸ್‌ಎಂಇ ಉತ್ತೇಜನದಿಂದ ಆರ್ಥಿಕ ಪರಿವರ್ತನೆ ಸಾಧ್ಯವಾಗುತ್ತದೆ ಎಂದು ಪ್ರಧಾನಿ ಮೋದಿ ಹೇಳಿದ್ದಾರೆ.

ನವದೆಹಲಿ, ಫೆಬ್ರವರಿ 16: ಅಮೆರಿಕ ಮತ್ತು ಯುರೋಪಿಯನ್ ಒಕ್ಕೂಟದೊಂದಿಗಿನ ವ್ಯಾಪಾರ ಒಪ್ಪಂದಗಳು ಮತ್ತು 2026ರ ಬಜೆಟ್ ನಂತರ ಪ್ರಧಾನಿ ನರೇಂದ್ರ ಮೋದಿತಮ್ಮ ಮೊದಲ ಸಂದರ್ಶನವನ್ನು ಪಿಟಿಐಗೆ ನೀಡಿದ್ದಾರೆ. ಖಾಸಗಿ ವಲಯದಲ್ಲಿರುವವರಿಗೆ ಅವರು ವಿಶೇಷ ಮನವಿ ಮಾಡಿದ್ದಾರೆ. ಲಾಭಕ್ಕಿಂತ ಗುಣಮಟ್ಟದ ಮೇಲೆ ಗಮನಹರಿಸುವಂತೆ ಕರೆ ನೀಡಿದ್ದಾರೆ. ಭಾರತದ ಮುಂದಿನ ಹಂತದ ಆರ್ಥಿಕ ಪರಿವರ್ತನೆಯಲ್ಲಿ ಖಾಸಗಿ ವಲಯವು ಪ್ರಮುಖ ಪಾತ್ರ ವಹಿಸುತ್ತದೆ ಎಂದು ಪ್ರಧಾನಿ ಮೋದಿ ಹೇಳಿದರು. ಡಿಜಿಟಲ್ ಬೆಳವಣಿಗೆ ಮತ್ತು ರಕ್ಷಣಾ ಆಧುನೀಕರಣದಂತಹ ವಿಷಯಗಳನ್ನು ಅವರು ಒತ್ತಿ ಹೇಳಿದರು.

ಅಭಿವೃದ್ಧಿ ಹೊಂದಿದ ಭಾರತದ ದೃಷ್ಟಿಕೋನವನ್ನು ಸಾಧಿಸಲು ಉದ್ಯಮದ ಸಾಮರ್ಥ್ಯಗಳಿಗೆ ಅನುಗುಣವಾಗಿ ನಾವೀನ್ಯತೆ ಮತ್ತು ದೊಡ್ಡ ಹೂಡಿಕೆಗಳ ಪ್ರಾಮುಖ್ಯತೆ ಬಗ್ಗೆ ಮಾತನಾಡಿದ್ದಾರೆ. ಕೈಗಾರಿಕೀಕರಣ ಮತ್ತು ನಗರೀಕರಣದೊಂದಿಗೆ, ಗ್ರಾಮೀಣ ಪ್ರದೇಶದ ಅನೇಕ ಯುವಕರು ನಗರಗಳಿಗೆ ತೆರಳಿ ಜಾಗತಿಕವಾಗಿ ಸಂಪರ್ಕ ಹೊಂದಿದ ಕೈಗಾರಿಕೆಗಳಲ್ಲಿ ಕೆಲಸ ಮಾಡಲು ಬಯಸುತ್ತಾರೆ ಎಂದು ಪ್ರಧಾನಿ ಮೋದಿ ಹೇಳಿದರು.

ಹಿಂದಿನ ಸರ್ಕಾರಗಳು ಉತ್ಪಾದನಾ ವಲಯದಲ್ಲಿ ಕೆಲಸ ಮಾಡಲಿಲ್ಲ: ಪ್ರಧಾನಿ ಮೋದಿ ನಮ್ಮ ಸರ್ಕಾರ ಅಧಿಕಾರಕ್ಕೆ ಬರುವ ಮೊದಲೇ ಈ ಸಮಸ್ಯೆಗಳನ್ನು ಬಗೆಹರಿಸಬೇಕಿತ್ತು, ದುರದೃಷ್ಟವಶಾತ್, ಹಿಂದಿನ ಸರ್ಕಾರಗಳು ಈ ದಿಕ್ಕಿನಲ್ಲಿ ಹೆಚ್ಚಿನ ಕೆಲಸ ಮಾಡಲಿಲ್ಲ. ಆದರೆ ನಾವು ನಮ್ಮ ವಿಧಾನವನ್ನು ಬದಲಾಯಿಸಿದ್ದೇವೆ. ಅಭಿವೃದ್ಧಿ ಹೊಂದಿದ ಭಾರತದ ನಮ್ಮ ದೃಷ್ಟಿಕೋನಕ್ಕೆ ಉತ್ಪಾದನೆ ಯಾವಾಗಲೂ ಕೇಂದ್ರವಾಗಿದೆ. ಯಾವುದೇ ದೇಶವು ಕೇವಲ ಗ್ರಾಹಕರಾಗಿರುವುದರಿಂದ ವೇಗವಾಗಿ ಪ್ರಗತಿ ಸಾಧಿಸಲು ಸಾಧ್ಯವಿಲ್ಲ. ಅವರು ಜಾಗತಿಕ ಮಟ್ಟದಲ್ಲಿ ಉತ್ತಮ ಗುಣಮಟ್ಟದ ಉತ್ಪಾದಕರಾಗಬೇಕು.

ಇದಕ್ಕಾಗಿಯೇ ಮೇಕ್ ಇನ್ ಇಂಡಿಯಾವನ್ನು ಪ್ರಾರಂಭಿಸಲಾಯಿತು. ಕಾಲಾನಂತರದಲ್ಲಿ, ಉತ್ಪಾದನೆ–ಸಂಬಂಧಿತ ಪ್ರೋತ್ಸಾಹಕ ಯೋಜನೆಗಳನ್ನು ಜಾರಿಗೆ ತರಲಾಯಿತು. ಈ ಪ್ರಯತ್ನಗಳು



ಭಾರತದ ಕೈಗಾರಿಕಾ ನೆಲೆಯನ್ನು ಪುನರ್ನಿರ್ಮಿಸುತ್ತಿವೆ, ಜಾಗತಿಕ ಮೌಲ್ಯ ಸರಪಳಿಗಳಲ್ಲಿ ನಮ್ಮನ್ನು ಸಂಯೋಜಿಸುತ್ತಿವೆ ಮತ್ತು ಗಮನಾರ್ಹ ಉದ್ಯೋಗವನ್ನು ಸೃಷ್ಟಿಸುತ್ತಿವೆ. ನಮ್ಮ ಯುವಕರು ಅಗತ್ಯ ಕೌಶಲ್ಯಗಳನ್ನು ಅಭಿವೃದ್ಧಿಪಡಿಸಲು ನಾವು ಸಹಾಯ ಮಾಡುತ್ತಿದ್ದೇವೆ. ಫಲಿತಾಂಶಗಳು ನಮ್ಮೆದುರೇ ಕಾಣುತ್ತಿವೆ ಎಂದು ಪ್ರಧಾನಿ ಮೋದಿ ಹೇಳಿದ್ದಾರೆ.

ಭಾರತದ ಸರಕುಗಳ ರಫ್ತು ಹಿಂದಿನ ದಾಖಲೆಗಳನ್ನು ಮುರಿದಿದೆ. ಒಂದು ದಶಕದ ನಂತರ, ಭಾರತ ವಿಶ್ವದ ಎರಡನೇ ಅತಿದೊಡ್ಡ ಮೊಬೈಲ್ ಫೋನ್ ಉತ್ಪಾದಕ ರಾಷ್ಟ್ರವಾಗಿದೆ. ಇದಕ್ಕೂ ಮೊದಲು, ಭಾರತ ತನ್ನ ಎಲ್ಲಾ ಮೊಬೈಲ್ ಫೋನ್‌ಗಳನ್ನು ಆಮದು ಮಾಡಿಕೊಳ್ಳುತ್ತಿತ್ತು. ಜಾಗತಿಕವಾಗಿ ಪ್ರಸಿದ್ಧವಾದ ಫೋನ್ ಬ್ರ್ಯಾಂಡ್‌ಗಳನ್ನು ಭಾರತದಲ್ಲಿ ತಯಾರಿಸಲಾಗುತ್ತಿದೆ.

ಭಾರತವು ಔಷಧಗಳ ವಿಶ್ವಾಸಾರ್ಹ ಪೂರೈಕೆದಾರ , ನಮ್ಮ ಎಲೆಕ್ಟ್ರಾನಿಕ್ಸ್ ಉತ್ಪಾದನೆಯೂ ಬೆಳೆದಿದೆ. ಜವಳಿ, ಎಂಜಿನಿಯರಿಂಗ್ ಸರಕುಗಳು ಮತ್ತು ರಾಸಾಯನಿಕಗಳಲ್ಲಿ ಇದೇ ರೀತಿಯ ಪ್ರಗತಿಯನ್ನು ಕಾಣಬಹುದು. ಒಂದು ಕಾಲದಲ್ಲಿ ಲಘುವಾಗಿ ಪರಿಗಣಿಸಲಾಗಿದ್ದ ಕ್ಷೇತ್ರಗಳಲ್ಲಿ ಈ ಬದಲಾವಣೆ ಸ್ಪಷ್ಟವಾಗಿ ಗೋಚರಿಸುತ್ತದೆ.

ಕಳೆದ ದಶಕದಲ್ಲಿ ಭಾರತದಲ್ಲಿ ಆಟಿಕೆ ರಫ್ತು ವೇಗವಾಗಿ ಬೆಳೆದಿದೆ ಎಂದು ಅವರು ಹೇಳಿದರು. ನಮ್ಮ ಯುವ ನಾವೀನ್ಯಕಾರರು ಭಾರತದಲ್ಲಿ ಸ್ಟಾರ್ಟ್‌ಅಪ್ ಕ್ರಾಂತಿಯನ್ನು ಹುಟ್ಟುಹಾಕಿದ್ದಾರೆ ಎಂಬುದು ಎಲ್ಲರಿಗೂ ತಿಳಿದಿದೆ. ನಾವು ಒಂದು ದಶಕದೊಳಗೆ ಕೆಲವೇ ನೂರು ಸ್ಟಾರ್ಟ್‌ಅಪ್‌ಗಳಿಂದ 200,000 ಕ್ಕೂ ಹೆಚ್ಚು ಸ್ಟಾರ್ಟ್‌ಅಪ್‌ಗಳಿಗೆ ಬೆಳೆದಿದ್ದೇವೆ. ನಾವು ಇವುಗಳನ್ನು ತಂತ್ರಜ್ಞಾನ ಸ್ಟಾರ್ಟ್‌ಅಪ್‌ಗಳೆಂದು ಭಾವಿಸುತ್ತೇವೆ, ಆದರೆ ಅವುಗಳಲ್ಲಿ ಹಲವು ಉತ್ಪಾದನೆಗೆ ಸಂಬಂಧಿಸಿದ ಸ್ಟಾರ್ಟ್‌ಅಪ್‌ಗಳಾಗಿವೆ. ಇವು ನಮ್ಮ ಯುವಕರಿಗೆ ಉದ್ಯೋಗಾವಕಾಶಗಳನ್ನು ಸೃಷ್ಟಿಸುತ್ತಿವೆ. ಉತ್ಪಾದನೆಯಲ್ಲಿನ ಬೆಳವಣಿಗೆಯು ನಮ್ಮ ಯುವಕರಿಗೆ ಗಮನಾರ್ಹ ಸಂಖ್ಯೆಯ ಉದ್ಯೋಗಗಳನ್ನು ಸೃಷ್ಟಿಸಿದೆ.

2026 ರ ಬಜೆಟ್ ಉತ್ಪಾದನಾ ಕಾರ್ಯತಂತ್ರವನ್ನು ಮುಂದಕ್ಕೆ ಕೊಂಡೊಯ್ಯುತ್ತದೆ:ನರೇಂದ್ರ ಮೋದಿ ಇದಲ್ಲದೆ, 2026 ರ ಬಜೆಟ್ ಉತ್ಪಾದನಾ ಕಾರ್ಯತಂತ್ರವನ್ನು ಮುನ್ನಡೆಸುತ್ತದೆ. ಇದು ವಲಯವನ್ನು ಬಲಪಡಿಸುತ್ತದೆ.ಬಜೆಟ್2026 ಉತ್ಪಾದನಾ ವ್ಯವಸ್ಥೆಯನ್ನು ಬಲಪಡಿಸುವ ಗುರಿಯನ್ನು ಹೊಂದಿದೆ ಎಂದರು.

ಎಂಎಸ್‌ಎಂಇ ಬಗ್ಗೆ ಪ್ರಧಾನಿ ಹೇಳಿದ್ದೇನು? ಭಾರತದ ಬಲವಾದ ಉತ್ಪಾದನೆ, ಸೇವೆ ಮತ್ತು ಎಂಎಸ್‌ಎಂಇ (ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಉದ್ಯಮಗಳು) ವಲಯವು ಭಾರತವು ತನ್ನದೇ ಆದ ನಿಯಮಗಳ ಮೇಲೆ 38 ದೇಶಗಳೊಂದಿಗೆ ವ್ಯಾಪಾರ ಒಪ್ಪಂದಗಳನ್ನು ಮಾತುಕತೆ ನಡೆಸಲು ಅನುವು ಮಾಡಿಕೊಟ್ಟಿದೆ ಎಂದು ಅವರು ಹೇಳಿದರು. ಜವಳಿ, ಚರ್ಮ, ರಾಸಾಯನಿಕಗಳು, ಕರಕುಶಲ ವಸ್ತುಗಳು, ಆಭರಣಗಳು ಮತ್ತು ಇತರ ವಲಯಗಳಲ್ಲಿನ ಸಣ್ಣ ಮತ್ತು ಮಧ್ಯಮ ಉದ್ಯಮಗಳಿಗೆ ಮಾರುಕಟ್ಟೆ ಪ್ರವೇಶವನ್ನು ವಿಸ್ತರಿಸಲು ನಮ್ಮ ಮುಕ್ತ ವ್ಯಾಪಾರ ಒಪ್ಪಂದಗಳ ವಿನ್ಯಾಸಗೊಳಿಸಲಾಗಿದೆ ಎಂದು ಅವರು ಹೇಳಿದರು.

ಸರ್ಕಾರಿ ಬಜೆಟ್‌ಗಳು ಕೇವಲ ಲೆಕ್ಕಪತ್ರಗಳ ದಾಖಲೆಯಲ್ಲ ಸರ್ಕಾರಿ ಬಜೆಟ್‌ಗಳು ಕೇವಲ ಲೆಕ್ಕಪತ್ರ ದಾಖಲೆಗಳಲ್ಲ, ಬದಲಾಗಿ ದೇಶದ ದೀರ್ಘಕಾಲೀನ ಅಭಿವೃದ್ಧಿಯ ಮಾರ್ಗಸೂಚಿಯಾಗಿದೆ .ಇತ್ತೀಚಿನ ವರ್ಷಗಳಲ್ಲಿ ಭಾರತೀಯ ಉತ್ಪನ್ನಗಳು ಹಿಂದಿನ ಎಲ್ಲಾ ರಫ್ತು ದಾಖಲೆಗಳನ್ನು ಮುರಿದಿದೆ.

ಸುಧಾರಣೆಯೇ ಎನ್ ಡಿಎ ಸರ್ಕಾರದ ಬದ್ಧತೆ: ಪ್ರಧಾನಿ ಮೋದಿ ಯುಪಿ ಎ ಸರ್ಕಾರದ ಆರ್ಥಿಕ ದುರಾಡಳಿತವನ್ನು ಪ್ರಧಾನಿ ಮೋದಿ ತೀವ್ರವಾಗಿ ಟೀಕಿಸಿದರು.ಇದರಿಂದಾಗಿ ಭಾರತವು ಇತರ ದೇಶಗಳೊಂದಿಗೆ ವ್ಯಾಪಾರ ಒಪ್ಪಂದಗಳನ್ನು ವಿಶ್ವಾಸದಿಂದ ಮಾತುಕತೆ ನಡೆಸಲು ಸಾಧ್ಯವಾಗಲಿಲ್ಲ.ಯುಪಿಎ ಆಡಳಿತದ ಅವಧಿಯಲ್ಲಿ,



ವ್ಯಾಪಾರ ಒಪ್ಪಂದದ ಮಾತುಕತೆಗಳು ಪ್ರಾರಂಭವಾಗಿ ನಂತರ ಮುರಿದು ಬೀಳುತ್ತಿದ್ದವು.ಅನೇಕ ದೇಶಗಳೊಂದಿಗೆ ದೀರ್ಘ ಮಾತುಕತೆಗಳ ಹೊರತಾಗಿಯೂ, ಯಾವುದೇ ಕಾಂಕ್ರೀಟ್ ಫಲಿತಾಂಶಗಳನ್ನು ಸಾಧಿಸಲಾಗಲಿಲ್ಲ.ಸುಧಾರಣೆಯು ಎನ್ ಡಿಎ ಸರ್ಕಾರದ ಬದ್ಧತೆಯಾಗಿದೆ.

ಭಾರತದಲ್ಲಿ ಕಂಪ್ಯೂಟಿಂಗ್ ಸಾಮರ್ಥ್ಯ ಮತ್ತು ಡೇಟಾ ಸೆಂಟರ್ ಮೂಲಸೌಕರ್ಯವನ್ನು ವಿಸ್ತರಿಸುವ ಮೂಲಕ ಭಾರತವು ಅಭಿವೃದ್ಧಿ ಹೊಂದುತ್ತಿರುವ ಎಐ ಪರಿಸರ ವ್ಯವಸ್ಥೆಗೆ ಅಡಿಪಾಯ ಹಾಕುತ್ತಿದೆ. ಮುಂದಿನ ದಶಕಗಳಲ್ಲಿ ಪ್ರಧಾನಿ ಮೋದಿ ಮೂರು ಪ್ರಮುಖ ಸುಧಾರಣೆಗಳಿಗೆ ಆದ್ಯತೆಗಳನ್ನು ವಿವರಿಸಿದ್ದಾರೆ.

ಭಾರತ'ದ ಪ್ರಗತಿಗೆ ಮಹಿಳೆಯರ ನೇತೃತ್ವ ಪ್ರಧಾನಿ ನರೇಂದ್ರ ಮೋದಿ ಅವರು ತಮ್ಮ ಸರ್ಕಾರ ತೆಗೆದುಕೊಳ್ಳುವ ಪ್ರತಿಯೊಂದು ನಿರ್ಧಾರ'ವನ್ನು ಮಹಿಳೆಯರ ಕಲ್ಯಾ ಗಮನದಲ್ಲಿಟ್ಟುಕೊಂಡು ತೆಗೆದುಕೊಳ್ಳಲಾಗುತ್ತಿದೆ ಎಂದು ಸ್ಪಷ್ಟವಾಗಿ ಹೇಳಿದ್ದಾರೆ. ಸರ್ಕಾರದ ನೀತಿಗಳು ಮತ್ತು ನಿರ್ಧಾರಗಳ ಹಿಂದಿನ ಪ್ರಮುಖ ಮಾರ್ಗದರ್ಶಿ ಶಕ್ತಿ ಮಹಿಳೆ. ಅಭಿವೃದ್ಧಿ ಹೊಂದಿದ ಭಾರತವನ್ನು ನಿರ್ಮಿಸುವಲ್ಲಿ ಮಹಿಳೆಯರು ನಿರ್ಣಾಯಕ ಪಾತ್ರ ವಹಿಸುತ್ತಾರೆ ಮತ್ತು ಮಹಿಳೆಯರು ದೇಶದ ಪ್ರಗತಿಯನ್ನು ಮುನ್ನಡೆಸುತ್ತಾರೆ ಎಂಬ ವಿಶ್ವಾಸ ನನಗಿದೆ ಎಂದು ಪ್ರಧಾನಿ ಮೋದಿ ಹೇಳಿದ್ದಾರೆ.

## ಅಸ್ವಸ್ಥತೆಯಿಂದ ದೂರ ಇರಬೇಕಾದರೆ ನಮ್ಮ ಪ್ರತಿರೋಧ ಶಕ್ತಿಯನ್ನು ಬೆಳೆಸಿಕೊಳ್ಳಬೇಕು

ಮಳೆಗಾಲ ನಿಮಗೆ ಅಸಾಧ್ಯ ಸೆಖೆಯಿಂದ ಮುಕ್ತಿ ನೀಡುವುದೇನೋ ನಿಜ. ಆದರೆ ಹಲವು ಆರೋಗ್ಯ ಸಮಸ್ಯೆಗಳು ಇಡೀ ಮಳೆಗಾಲದಲ್ಲಿ ನಿಮ್ಮನ್ನು ಕಾಡುತ್ತಿರುತ್ತವೆ. ಸೋಂಕು ಅಥವಾ ಅಸ್ವಸ್ಥತೆಗಳು ಮಳೆಗಾಲದಲ್ಲಿ ಸಾಮಾನ್ಯ ಇದರಿಂದಾಗಿ ಅಗತ್ಯ ಪ್ರತಿರೋಧ ವ್ಯವಸ್ಥೆ ಅನಿವಾರ್ಯ. ಇಂಥ ಹವಾಮಾನ ಸಂದರ್ಭದ ಅಸ್ವಸ್ಥತೆಯಿಂದ ದೂರ ಇರಬೇಕಾದರೆ ನಮ್ಮ ಪ್ರತಿರೋಧ ಶಕ್ತಿಯನ್ನು ಬೆಳೆಸಿಕೊಳ್ಳಬೇಕು.

ಆಸ್ಟರ್ ಸಿಎಂಐ ಆಸ್ಪತ್ರೆಯ ಕ್ಲಿನಿಕ್ ನ್ಯೂಟ್ರೇಶನ್ ಮತ್ತು ಡಯಟೆಸ್ಟಿಕ್ ಸೇವೆಗಳ ವಿಭಾಗದ ಮುಖ್ಯಸ್ಥ ಡಾ.ಎಲ್ವಿನಾ ರಾಜ್ ನಮ್ಮ ಪ್ರತಿರೋಧ ವ್ಯವಸ್ಥೆಯನ್ನು ಬಲಗೊಳಿಸಲು ಮತ್ತು ಆರೋಗ್ಯಕರ ಮಳೆಗಾಲವನ್ನು ಆಸ್ವಾದಿಸಲು ಕೆಲ ಸಲಹೆಗಳನ್ನು ನೀಡಿದ್ದಾರೆ.

1. ಸಮತೋಲಿತ ಮತ್ತು ಪೌಷ್ಟಿಕಾಂಶ ಸಮೃದ್ಧ ಆಹಾರಕ್ರಮ

ಮಳೆಗಾಲದಲ್ಲಿ ಸಮತೋಲಿನ ಆಹಾರ ಕ್ರಮ ಅನುಸರಿಸುವುದು ಮೊದಲನೇ ಅಗತ್ಯ ಹಲವು ತರಕಾರಿ ಹಾಗೂ ಹಣ್ಣುಗಳು, ಇಡಿಯ ಕಾಳು, ಕ್ಷೀಣ ಪ್ರೊಟಿನ್ ನಿಮ್ಮ ಆಹಾರದ ಭಾಗವಾಗಬೇಕು. ಇವು ಹೆಚ್ಚಿನ ವಿಟಮಿನ್, ಖನಿಜಾಂಶ ಹೊಂದಿದ್ದು, ಇದು ನಿಮ್ಮ ಪ್ರತಿರೋಧ ರಕ್ಷಣಾ ವ್ಯವಸ್ಥೆಗೆ ಪೂರಕ. ಕಿತ್ತಳೆ, ಸೀಬೆ, ಕಿವಿ, ಪಪ್ಪಾಯಿ, ನಿಂಬೆ ಅಧಿಕ ವಿಟಮಿನ್ ಸಿ ಅಂಶವನ್ನು ಹೊಂದಿದ್ದು, ಇದು ಪ್ರತಿರೋಧ ಶಕ್ತಿ ಹೆಚ್ಚಿಸುತ್ತದೆ. ಅಂತೆಯೇ ಶುಂಠಿ, ಬೆಳ್ಳುಳ್ಳಿ ಮತ್ತು ಅರಸಿನ ಬ್ಯಾಕ್ಟಿರಿಯಾ ಪ್ರತಿರೋಧದ ಅಂಶವನ್ನು ಹೊಂದಿವೆ.

2. ಉತ್ತಮ ನೈರ್ಮಲ್ಯ ಅಭ್ಯಾಸ

ಮಳೆಗಾಲದಲ್ಲಿ ರೋಗ ಹರಡುವುದು ತಡೆಯಲು ಉತ್ತಮ ನೈರ್ಮಲ್ಯ ನಿರ್ವಹಿಸುವುದು ಅಗತ್ಯ ನಿಯತವಾಗಿ ಸೋಪ್‌ವಾಟರ್



ನಲ್ಲಿ ಕೈತೊಳೆಯುತ್ತಿರಬೇಕು. ಅದರಲ್ಲೂ ಮುಖ್ಯವಾಗಿ ಊಟಕ್ಕೆ ಮುನ್ನ ಕೈ ತೊಳೆಯುವುದು ಅಪಾಯಕಾರಿ ವೈರಸ್‌ಗಳನ್ನು ಮತ್ತು ಬ್ಯಾಕ್ಟಿರಿಯಾಗಳನ್ನು ನಿರ್ಮೂಲನೆ ಮಾಡಲು ಹೆಚ್ಚು ಸಹಕಾರಿ. ಇಂಥ ವೈರಸ್ ಅಥವಾ ಬ್ಯಾಕ್ಟಿರಿಯಾಗಳು ಇರುವಾಗ ಮುಖ ಒರೆಸಿಕೊಂಡರು ಕೂಡಾ ನಿಮ್ಮ ಕಣ್ಣು ಮೂಗು ಬಾಯಿಯ ಮೂಲಕ ಸೋಂಕು ಹರಡುವ ಸಾಧ್ಯತೆ ಇರುತ್ತದೆ.

3. ಸಾಕಷ್ಟು ನಿದ್ದೆ ಹಾಗೂ ಒತ್ತಡ ನಿರ್ವಹಣೆಯೂ ಮುಖ್ಯ

ಇದನ್ನೂ ಓದಿ ನಿಯಮಿತ ವ್ಯಾಯಾಮದ ಹೊರತಾಗಿಯೂ ತೂಕ ಇಳಿಯುತ್ತಿಲ್ಲವೆ? ದಿನಚರಿ ಬದಲಿಸಿ

ರಾತ್ರಿಯು ವೇಳೆ ಏಳೆಂಟು ಗಂಟೆ ಸುಖನಿದ್ರೆ ಮಳೆಗಾಲದಲ್ಲಿ ಅಗತ್ಯ ನಿದ್ರಾಹೀನತೆ ನಿಮ್ಮ ಪ್ರತಿರಕ್ಷಣಾ ವ್ಯವಸ್ಥೆಯನ್ನು ಶಿಥಿಲಗೊಳಿಸುತ್ತದೆ ಹಾಗೂ ರೋಗ ಕಾರಕ ಅಂಶಗಳು ಹೆಚ್ಚಲು ಕಾರಣ ವಾಗುತ್ತದೆ. ಅಂತೆಯೇ ಅಧಿಕ ಒತ್ತಡ ಕೂಡಾ ನಿಮ್ಮ ಪ್ರತಿರಕ್ಷಣಾ ವ್ಯವಸ್ಥೆಗೆ ಮಾರಕ. ಉದ್ವಿಗ್ನತೆ ಕಡಿಮೆ ಮಾಡಿಕೊಂಡು ಧ್ಯಾನ, ಸುಧೀರ್ಘ ಉಸಿರಾಟದ ಅಭ್ಯಾಸ ಅಥವಾ ಯೋಗದ ಮೂಲಕ ಇದನ್ನು ನಿಭಾಯಿಸಬಹುದಾಗಿದೆ.

4. ನಿಯತ ದೈಹಿಕ ವ್ಯಾಯಾಮ

ಕೂಡಾ ನಿಮ್ಮ ಪ್ರತಿರಕ್ಷಣಾ ವ್ಯವಸ್ಥೆಗೆ ಪೂರಕ.

ಸಮತೋಲಿತ ಮತ್ತು ಪೌಷ್ಟಿಕಾಂಶ ಸಮೃದ್ಧ ಆಹಾರಕ್ರಮವು ಕಾರ್ಬೋಹೈಡ್ರೇಟ್‌ಗಳು, ಪ್ರೋಟೀನ್, ಆರೋಗ್ಯಕರ ಕೊಬ್ಬುಗಳು, ವಿಟಮಿನ್‌ಗಳು, ಖನಿಜಗಳು ಮತ್ತು ನಾರಿನಂಶವನ್ನು ಒಳಗೊಂಡಿರುತ್ತದೆ, ಇದು ದೇಹಕ್ಕೆ ಅಗತ್ಯವಾದ ಶಕ್ತಿ ಮತ್ತು ದೀರ್ಘಕಾಲೀನ ಆರೋಗ್ಯವನ್ನು ಒದಗಿಸುತ್ತದೆ. ದೈನಂದಿನ ಆಹಾರದಲ್ಲಿ ತಾಜಾ ತರಕಾರಿಗಳು, ಹಣ್ಣುಗಳು, ಧಾನ್ಯಗಳು, ಬೇಳೆಕಾಳುಗಳು ಮತ್ತು ಸಾಕಷ್ಟು ನೀರನ್ನು ಸೇರಿಸುವುದು ಒಟ್ಟಾರೆ ಆರೋಗ್ಯಕ್ಕೆ ಅತ್ಯಗತ್ಯ.

### ಸಮತೋಲಿತ ಆಹಾರದ ಪ್ರಮುಖ ಅಂಶಗಳು:

ಕಾರ್ಬೋಹೈಡ್ರೇಟ್‌ಗಳು (ಶಕ್ತಿಗಾಗಿ): ಧಾನ್ಯಗಳು, ದವಸ ಧಾನ್ಯಗಳು ಮತ್ತು ಪಿಷ್ಟ ತರಕಾರಿಗಳು ಶಕ್ತಿಯನ್ನು ಒದಗಿಸುತ್ತವೆ.

ಪ್ರೋಟೀನ್ (ಸ್ನಾಯುಗಳ ಬೆಳವಣಿಗೆಗೆ): ಬೇಳೆಕಾಳುಗಳು, ದ್ವಿದಳ ಧಾನ್ಯಗಳು, ಮೀನು, ಮೊಟ್ಟೆ, ಕೋಳಿ, ಮತ್ತು ತೋಫು ಪ್ರೋಟೀನ್‌ನ ಉತ್ತಮ ಮೂಲಗಳು.

ಆರೋಗ್ಯಕರ ಕೊಬ್ಬುಗಳು (ಮೆದುಳಿನ ಕಾರ್ಯಕ್ಕೆ): ಆವಕಾಡೊ, ಬೀಜಗಳು, ಮತ್ತು ಆಲಿವ್ ಎಣ್ಣೆ ಮುಂತಾದವುಗಳನ್ನು ಮಿತವಾಗಿ ಬಳಸುವುದು ಉತ್ತಮ.

ವಿಟಮಿನ್ ಗಳು ಮತ್ತು ಖನಿಜಗಳು (ರೋಗನಿರೋಧಕ ಶಕ್ತಿ): ವೈವಿಧ್ಯಮಯ ತರಕಾರಿಗಳು ಮತ್ತು ಹಣ್ಣುಗಳು ವಿಟಮಿನ್‌ಗಳು ಮತ್ತು ಖನಿಜಗಳ ಪೂರೈಕೆಯನ್ನು ಖಚಿತಪಡಿಸುತ್ತವೆ.

ನಾರಿನಂಶ (ಜೀರ್ಣಕ್ರಿಯೆಗೆ): ಫೈಬರ್ ಭರಿತ ಆಹಾರಗಳು ಜೀರ್ಣಕ್ರಿಯೆಗೆ ಸಹಾಯ ಮಾಡುತ್ತವೆ.

### ಪೌಷ್ಟಿಕ ಆಹಾರದ ಮಾರ್ಗಸೂಚಿಗಳು:

ತಟ್ಟೆಯ ಸಮತೋಲನ: ಪ್ರತಿ ಊಟದಲ್ಲಿ ಪ್ರೋಟೀನ್, ಕಾರ್ಬೋಹೈಡ್ರೇಟ್‌ಗಳು ಮತ್ತು ಆರೋಗ್ಯಕರ ಕೊಬ್ಬುಗಳನ್ನು ಸೇರಿಸಿಕೊಳ್ಳಿ.

ತರಕಾರಿ ಮತ್ತು ಹಣ್ಣುಗಳು: ಪ್ರತಿದಿನ ಸಾಕಷ್ಟು ತಾಜಾ ಹಣ್ಣುಗಳು ಮತ್ತು ತರಕಾರಿಗಳನ್ನು ಸೇವಿಸಿ.

ಮಿತಗೊಳಿಸುವುದು: ಸಂಸ್ಕರಿಸಿದ ಆಹಾರಗಳು, ಸಕ್ಕರೆ ಪಾನೀಯಗಳು, ಮತ್ತು ಅಧಿಕ ಕೊಬ್ಬಿನಂಶವಿರುವ ಪದಾರ್ಥಗಳನ್ನು ಕಡಿಮೆ ಮಾಡಿ.

ಜಲಸಂಯೋಜನೆ: ದಿನವಿಡೀ ಸಾಕಷ್ಟು ನೀರು ಕುಡಿಯುವುದು ಅವಶ್ಯಕ.

ಭಾಗದ ನಿಯಂತ್ರಣ: ಹಸಿವಿನ ಪ್ರಮಾಣಕ್ಕೆ ಅನುಗುಣವಾಗಿ, ಅತಿಯಾಗಿ ತಿನ್ನದೆ, ಸಮತೋಲಿತ ಪ್ರಮಾಣದಲ್ಲಿ ಊಟ ಮಾಡಿ.

# ಕೆಂದಲೆ ರಣಹದ್ದಿನ ರೋಚಕ ಪ್ರಪಂಚ !

ಕಳೆದ ವರ್ಷ ಇದೇ ತಿಂಗಳ ಮೊದಲ ವಾರದಲ್ಲಿ ನಾಗರಹೊಳೆ ಅಭಯಾರಣ್ಯದಲ್ಲಿ ಹಕ್ಕಿಗಣತಿ ಕಾರ್ಯದಲ್ಲಿ ಭಾಗವಹಿಸುವ ಅವಕಾಶ ನನಗೂ ಒದಗಿ ಬಂದಿತ್ತು. ನಾಗರಹೊಳೆ ಎಂದರೆ ಹುಲಿಗಳು ಮತ್ತು ಆನೆಗಳಿಗೆ ಹೆಸರಾದ ಜಾಗ. ಇಡೀ ದೇಶದಲ್ಲೇ ಹುಲಿಗಳು ಹೆಚ್ಚಿನ ಸಂಖ್ಯೆಯಲ್ಲಿರುವ ಕಾಡು ಎಂದು ಅಲ್ಲಿನ ಅರಣ್ಯಾಧಿಕಾರಿಗಳು ಹೇಳಿಕೊಳ್ಳುತ್ತಾರೆ. ಅಂತೆಯೇ ಹೆಚ್ಚಿನ ಸಂಖ್ಯೆಯಲ್ಲಿ ಆನೆಗಳು ಇರುವ ಕಾಡೂ ಹೌದು. ಅಂತಹ ಕಾಡಿನಲ್ಲಿ ಹಕ್ಕಿಗಣತಿ ಮಾಡುವುದು ಏಕೆ ಎಂದು ನೀವು ಕೇಳಬಹುದು. ಪ್ರಾಣಿಗಳು ಸ್ವಚ್ಛಂದವಾಗಿ ವಿಹರಿಸುವ ಕಾಡಿನಲ್ಲಿ ಹಕ್ಕಿಗಳೂ ಯಥೇಚ್ಛವಾಗಿ ಇರಬಹುದು, ಅದನ್ನು ಗುರುತಿಸುವ ಕಾರ್ಯ ಆಗಬೇಕು ಎಂಬುದು ಅರಣ್ಯ ಇಲಾಖೆಯ ಆಶಯವಾಗಿತ್ತು.

ನಾಗರಹೊಳೆಗೆ ಪ್ರವೇಶ ಮಾಡುವ ವೀರನಹೊಸಹಳ್ಳಿ ಎಂಬ ವಲಯದಲ್ಲಿ ನಮಗೆ ಹಕ್ಕಿ ಗಣತಿ ಮಾಡಿ ವರದಿ ಮಾಡಲು ಅವಕಾಶ ನೀಡಲಾಗಿತ್ತು. ಬಯಲುಸೀಮೆಯ ಒಣ ಮತ್ತು ಎಲೆಉದುರಿಸುವ ಕುರುಚಲು ಕಾಡು ಅದಾಗಿತ್ತು. ಅರಣ್ಯ ಸಿಬ್ಬಂದಿಯ ಗಸ್ತು ವಾಹನಗಳು ಓಡಾಡಲು ಮಾಡಲಾದ ರಸ್ತೆಗಳಲ್ಲಿ ನಡೆದುಕೊಂಡು ಹಕ್ಕಿಗಳನ್ನು ಗುರುತಿಸಿ ದಾಖಲಿಸುವ ಕೆಲಸ ನಮ್ಮದಾಗಿತ್ತು. ಹಕ್ಕಿಗಳನ್ನು ಗುರುತಿಸಿ ಅವುಗಳ ಸಂಖ್ಯೆಯ ಜೊತೆಗೆ ಇಬರ್ಡ್ ಎಂಬ ಮೊಬೈಲ್ ಆಪ್ ನಲ್ಲಿ ಹಕ್ಕಿಗಳ ಮಾಹಿತಿ ದಾಖಲೆ ಮಾಡುತ್ತಾ ಬಿಸಿಲೇರುವ ಹೊತ್ತಿಗೆ ಕಾಡಿನ ನಡುವೆ ಇದ್ದ ಸಣ್ಣ ಕೆರೆಯೊಂದಕ್ಕೆ ಬಂದು ತಲುಪಿದೆವು.

ಅಲ್ಲೇ ಕುಳಿತು ದಣಿವಾರಿಸಿಕೊಳ್ಳುತ್ತಾ ತೆಗೆದುಕೊಂಡು ಬಂದ ಬೆಳಗ್ಗಿನ ಉಪಾಹಾರವನ್ನು ತಿಂದೆವು. ಕೆರೆಯ ಸುತ್ತಲೂ ಸ್ವಲ್ಪ ದೊಡ್ಡ ಮರಗಳು ಇದ್ದು ಅವುಗಳಲ್ಲಿ ಅನೇಕ ಕಾಡು ಹಣ್ಣುಗಳು ಇದ್ದುದರಿಂದ



ಹಕ್ಕಿಗಳ ಕಲರವ ಸ್ವಲ್ಪ ಹೆಚ್ಚಾಗಿತ್ತು. ಅವುಗಳನ್ನು ಗಮನಿಸುತ್ತಿದ್ದಾಗ ನಮ್ಮ ಜೊತೆಗಿದ್ದ ದಾಸಪ್ಪ ಎಂಬ ಅರಣ್ಯ ಸಿಬ್ಬಂದಿ ಆಕಾಸದಲ್ಲಿ ಯಾವುದೋ ಹದ್ದು ಹಾರ್ತಾ ಐತೆ ನೋಡಿ ಸಾರ್ ಎಂದರು. ನಮ್ಮ ಬಳಿ ಇದ್ದ ಬೈನಾಕುಲರ್ ನಿಂದ ನೋಡಿದರೆ ಅದು ಒಂದು ರಣಹದ್ದು ಎಂಬುದು ಸ್ಪಷ್ಟವಾಯಿತು. ಕೆರೆಯ ಮೇಲೆ ಎತ್ತರದಲ್ಲಿ ಹಾರಾಡಿದ ಅದನ್ನು ಕಣ್ತುಂಬಿಕೊಂಡು, ನಮ್ಮ ಬಳಿ ಇದ್ದ ಹಕ್ಕಿ ಪುಸ್ತಕ ತೆಗೆದು ಇದು ಯಾವ ರಣಹದ್ದು ಎಂದು ಹುಡುಕಿದೆವು.

ನಮ್ಮ ಜೊತೆಗಿದ್ದ ದಾಸಪ್ಪ, ವಸಂತ ಮತ್ತು ನಿಂಗಣ್ಣ ಅರಣ್ಯ ಇಲಾಖೆಯಲ್ಲಿ ವಾಚರ್ ಕೆಲಸ ಮಾಡುವವರು. ಅವರು ಹಿಂದೆ ನಾಗರಹೊಳೆ ಕಾಡಿನೊಳಗೆ ವಾಸವಾಗಿದ್ದ ಜೇನುಕುರುಬ ಮತ್ತು ಕಾಡುಕುರುಬ ಸಮುದಾಯಕ್ಕೆ ಸೇರಿದವರು. ಅವರ ಕಾಡಿನ ಬಗೆಗಿನ ತಿಳುವಳಿಕೆ ಅಗಾಧ. ಕೇವಲ ಪರಿಮಳ ಅಥವಾ ಶಬ್ದದಿಂದಲೇ ಇಂತಹ ಪ್ರಾಣಿ ಇದೆ, ಇಂತಹ ಮರ ಇದೆ ಎಂದು ಹೇಳಬಲ್ಲವರು ಅವರು. ಕೆರೆಯ ಮೇಲೆ ಹಾರಿದ ರಣಹದ್ದುಗಳನ್ನು ನೋಡಿದ್ದೀರಾ ಎಂದು ಕೇಳಿದಾಗ ಅವರು ಹೇಳಿದ ಮಾಹಿತಿ ಹೀಗಿತ್ತು. ಈ ಕಾಡಿನಲ್ಲಿ ಹುಲಿಗಳು ಬಹಳ ಇವೆ. ಅವುಗಳು ಜಿಂಕೆಯಂತಹ ಪ್ರಾಣಿಯನ್ನು ಬೇಟೆಯಾಡಿ ತಿಂದನಂತರ ನೀರು ಕುಡಿದು ದಣಿವಾರಿಸಿಕೊಳ್ಳುತ್ತವೆ. ಹುಲಿ ತಿಂದು ಉಳಿದ ಶವವನ್ನು ಹುಡುಕುತ್ತಾ ಇವುಗಳು ಹಾರಾಡುತ್ತವೆ. ಶವ ಕಾಣಿಸಿದರೆ ಅಲ್ಲಿ ಹೋಗಿ ಹೆಣದ ಮೂಳೆ ಒಂದನ್ನು ಬಿಟ್ಟು ಉಳಿದುದನ್ನೆಲ್ಲ ಹರಿದು ತಿನ್ನುತ್ತವೆ. ಅಂತಹ ಜಾಗಗಳಲ್ಲಿ ಒಂದಕ್ಕಿಂತ ಹೆಚ್ಚು ರಣಹದ್ದುಗಳು ಇರ್ತವೆ ಸಾರ್. ಹುಲಿ ತಿಂದು ಬಿಟ್ಟ ಪ್ರಾಣಿಯ ಶವ ಮಾತ್ರವಲ್ಲ, ಸತ್ತ ಯಾವುದೇ ಪ್ರಾಣಿಯ ಶವ ಸಿಕ್ಕರೂ ಇವುಗಳು ಬಿಡುವುದಿಲ್ಲ. ಎತ್ತರದ ಮರಗಳ ಮೇಲೆ ದೊಡ್ಡ ಅಟ್ಟಳಿಗೆ ತರಹ ಮಾಡಿ ಅಲ್ಲಿ ಮೊಟ್ಟೆ ಇಟ್ಟು ಮರಿಮಾಡುತ್ತವೆ. ಗಾತ್ರದಲ್ಲಿ ಸುಮಾರು ನವಿಲಿನಷ್ಟು ದೊಡ್ಡದಿರುತ್ತದೆ ಎಂದೆಲ್ಲ ತಮಗೆ ತಿಳಿದ ಮಾಹಿತಿಯನ್ನು ಹಂಚಿಕೊಂಡರು.

ಸತ್ತ ಪ್ರಾಣಿಗಳ ಶವವನ್ನು ತಿಂದು ಮುಗಿಸುವ ಈ ಹಕ್ಕಿಗಳು ಊರಿನಲ್ಲಿ ಇಲ್ಲವೆನ್ನುವಷ್ಟು ಅಪರೂಪ. ಹಾಗೊಂದು ಪ್ರಾಣಿ ಸತ್ತರೂ ವಾಸನೆ ಬರುವ ಮತ್ತು ರೋಗಗಳು ಬರಬಹುದು ಎಂಬ ಕಾರಣಕ್ಕೆನಾವು ಹಳ್ಳ ತೆಗೆದು ಹೂಳುವುದರಿಂದ ಈ ಹಕ್ಕಿಗಳಿಗೆ ಸತ್ತ ಪ್ರಾಣಿಗಳ ಶವ ಸಿಗುವುದಿಲ್ಲ. ರಸ್ತೆ ಅಪಘಾತದಲ್ಲಿ ಸಾಯುವ ಸಣ್ಣ ಪುಟ್ಟ ಪ್ರಾಣಿಗಳನ್ನು ಕಾಗೆ, ನಾಯಿ ಮೊದಲಾದವು ತಿಂದು ಮುಗಿಸುವುದರಿಂದ ರಣಹದ್ದುಗಳ ಸಂಖ್ಯೆ ಗಣನೀಯವಾಗಿ ಕಡಿಮೆಯಾಗಿದೆ. ಹಾಗಾಗಿ ರಣಹದ್ದುಗಳನ್ನು ಅಳಿವಿನ ಅಂಚಿನಲ್ಲಿರುವ ಜೀವಿಗಳು ಎಂದು ಪರಿಗಣಿಸಲಾಗಿದೆ. ನಾಗರಹೊಳೆಯಂತಹ ಅಭಯಾರಣ್ಯ ಹುಲಿಗಳಿಗಾಗಿ ಮಾಡಿದರೂ ಅವುಗಳ ಕಾರಣದಿಂದ ರಣಹದ್ದುಗಳು ಉಳಿದಿರುವುದು ಸಂತೋಷದ ಸಂಗತಿ. ಪರಿಸರದಲ್ಲಿರುವ ಅಂತರ್ ಸಂಬಂಧ ಮತ್ತು ಕಾಡುಗಳು ಉಳಿಯುವುದರ ಅಗತ್ಯವನ್ನು ಮತ್ತೆ ಬೇರೆಯೇ ವಿವರಿಸಬೇಕಿಲ್ಲ ತಾನೇ? ಹಕ್ಕಿಗಳ ಆಸಕ್ತಿ ಹುಟ್ಟಿದ ಹತ್ತು ವರ್ಷಗಳಲ್ಲಿ ಇದೇ ಮೊದಲಬಾರಿಗೆ ರಣಹದ್ದುಗಳನ್ನು ನೋಡಿ ನನಗೂ ಬಹಳ ಸಂತೋಷವಾಯಿತು.

ಕನ್ನಡ ಹೆಸರು: ಕೆಂದಲೆ ರಣಹದ್ದು

# ರಾಮನಗರ ಸುದ್ದಿ ಕಾರ್ನರ್

## ಮನೆ ಮುಂದೆ ಕೆಮ್ಮಿದ್ದಕ್ಕೆ ಮಾರಣಾಂತಿಕ ಹಲ್ಲೆ! ಚಿಕಿತ್ಸೆ ಫಲಿಸದೆ ವ್ಯಕ್ತಿ ಸಾವು





ರಾಮನಗರ ತಾಲೂಕಿನ ಬಿಡದಿಯಲ್ಲಿ ಕ್ಷುಲ್ಲಕ ಕಾರಣಕ್ಕೆ ನಡೆದ ಮಾರಣಾಂತಿಕ ಹಲ್ಲೆಯಲ್ಲಿ ರಾಜಸ್ಥಾನ ಮೂಲದ ವ್ಯಕ್ತಿಯೊಬ್ಬರು ಮೃತಪಟ್ಟಿದ್ದಾರೆ. ಮನೆ ಮುಂದೆ ಕೆಮ್ಮಿದ ವಿಚಾರಕ್ಕೆ ಪಕ್ಕದ ಮನೆಯವರು ವ್ಯಕ್ತಿಯ ಮೇಲೆ ಹಲ್ಲೆ ನಡೆಸಿದ್ದರು. ಗಾಯಗೊಂಡ ವ್ಯಕ್ತಿ ಚಿಕಿತ್ಸೆ ಫಲಿಸದೆ ಕೊನೆಯುಸಿರೆಳೆದಿದ್ದಾರೆ. ಬಿಡದಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ತಲೆಮರೆಸಿಕೊಂಡಿರುವ ಆರೋಪಿಗಳಿಗಾಗಿ ಪೊಲೀಸರು ಶೋಧ ನಡೆಸುತ್ತಿದ್ದಾರೆ.

ಸಮಾಜದಲ್ಲಿ ಯಾವ್ಯಾವುದೋ ವಿಚಾರಕ್ಕೆ ಗಲಾಟೆ, ಹಲ್ಲಗಳು ನಡೆಯುತ್ತವೆ. ಆದರೆ ವ್ಯಕ್ತಿಯೊಬ್ಬ ಮನೆ ಮುಂದೆ ಬಂದು ಕೆಮ್ಮಿದ ಎನ್ನುವ ಕ್ಷುಲ್ಲಕ ಕಾರಣಕ್ಕೆ ಮಾರಣಾಂತಿಕ ಹಲ್ಲೆ ನಡೆಸಿರುವ ಘಟನೆ ರಾಮನಗರ (ಖಚಿಟಟಿಚಿರಂಚಿಡಿ) ತಾಲೂಕಿನ ಬಿಡದಿಯಲ್ಲಿ ನಡೆದಿದೆ. ರಾಜಸ್ಥಾನ ಮೂಲದ ವ್ಯಕ್ತಿಯೊಬ್ಬ ಕೆಮ್ಮಿದ ವಿಚಾರಕ್ಕೆ ಶುರುವಾದ ಜಗಳ ವಿಕೋಪಕ್ಕೆ ತಿರುಗಿದೆ.

## ಸಣ್ಣದಾಗಿ ಶುರುವಾದ ಮಾತಿನ ಚಕಮಕಿ ವಿಕೋಪಕ್ಕೆ ತಿರುಗಿತು

ರಾಜಸ್ಥಾನ ಮೂಲದ ವಿನೋದ್ ಕುಮಾರ್ ಶೈನಿ (34) ಕಳೆದ 11 ವರ್ಷಗಳಿಂದ ಬಿಡದಿಯ ಖಾಸಗಿ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದು, ಅಲ್ಲಿಯೇ ವಾಸವಾಗಿದ್ದರು. ಮೂರು ದಿನಗಳ ಹಿಂದೆ ಮನೆ ಪಕ್ಕದಲ್ಲಿದ್ದ ಸಂಜಯ್ ಅವರೊಂದಿಗೆ ಮಾತಿನ ಚಕಮಕಿ ಉಂಟಾಗಿದ್ದು, ಕೆಮ್ಮಿದ ವಿಚಾರಕ್ಕೆ ಜಗಳ ತೀವ್ರಗೊಂಡಿದೆ ಎನ್ನಲಾಗಿದೆ. ಈ ವೇಳೆ ಸಂಜಯ್, ಹೊಂಬಯ್ಯ (ಹೊಂಬೆಗೌಡ), ವಿಜಯ್ ಸೇರಿದಂತೆ ಇತರರು ಸೇರಿ ವಿನೋದ್ ಮೇಲೆ ಮಾರಣಾಂತಿಕವಾಗಿ ಹಲ್ಲೆ ನಡೆಸಿದ್ದಾರೆ ಎಂದು ಆರೋಪಿಸಲಾಗಿದೆ.

ಗಂಭೀರವಾಗಿ ಗಾಯಗೊಂಡ ವಿನೋದ್ ಅವರನ್ನು ತಕ್ಷಣ ಬಿಡದಿಯ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆದರೆ ಚಿಕಿತ್ಸೆ ಫಲಕಾರಿಯಾಗದೇ ನಿನ್ನೆ ರಾತ್ರಿ ಅವರು ಮೃತಪಟ್ಟಿದ್ದಾರೆ ಎಂದು ತಿಳಿದು ಬಂದಿದೆ. ಘಟನೆ ಸಂಬಂಧ ಬಿಡದಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಹಲ್ಲೆ ನಡೆಸಿದ ಆರೋಪಿಗಳು ತಲೆಮರೆಸಿಕೊಂಡಿದ್ದಾರೆ. ಪರಾರಿಯಾಗಿರುವ ಆರೋಪಿಗಳ ಬಂಧನಕ್ಕಾಗಿ ಪೊಲೀಸರು ವ್ಯಾಪಕ ಶೋಧ ಕಾರ್ಯಾಚರಣೆ ನಡೆಸುತ್ತಿದ್ದಾರೆ.



ಮಹಾ ಶಿವರಾತ್ರಿ ಅಂಗವಾಗಿ ಬಿ.ಹೆಚ್. ರಸ್ತೆಂಯಲ್ಲಿರುವ ಶ್ರೀ ಸೋಮೇಶ್ವರಸ್ವಾಮಿ ದೇವಾಲಯದಲ್ಲಿ ಸ್ವಾಮಿಗೆ ಕ್ಷೀರಾಭಿಷೇಕ, ಕುಂಭಾಭಿಷೇಕ ನೆರವೇರಿತು. ಭಕ್ತಾದಿಗಳು ಸರದಿ ಸಾಲಿನಲ್ಲಿ ನಿಂತು ಸ್ವಾಮಿಯ ದರ್ಶನ ಪಡೆದರು. ತುಮಕೂರು ವಿಶ್ವವಿದ್ಯಾನಿಲಯದ ಕುಲಪತಿ ಡಾ. ವೆಂಕಟೇಶ್ವರಲು ಸ್ವಾಮಿಗೆ ಕುಂಭಾಭಿಷೇಕ ನೆರವೇರಿಸಿರು.



ಮಹಾಶಿವರಾತ್ರಿ ಹಬ್ಬದಂದು ಬೆಳಗುಂಬ ರಸ್ತೆಯಲ್ಲಿರುವ ಸರಪಳಿ ಸ್ವಾಮಿ ಮಠದಲ್ಲಿ ವಿಶೇಷವಾಗಿ ದ್ವಾದಶಿ ಜ್ಯೋತಿರ್ಲಿಂಗಕ್ಕೆ ವಿಶೇಷ ಪೂಜೆ ನೆರವೇರಿಸಲಾಯಿತು. ಭಕ್ತಾದಿಗಳು ಬೆಳಗ್ಗೆಯಿಂದಲೇ ಜ್ಯೋತಿರ್ಲಿಂಗದ ದರ್ಶನ ಪಡೆದರು.

## ಫೆ.28 ಪ್ರಾಥಮಿಕ ಶಾಲಾ ಶಿಕ್ಷಕರ ಸಮ್ಮೇಳನ




ರಾಮನಗರ: ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಸುವರ್ಣ ಮಹೋತ್ಸವದ ಆಚರಣೆಯ ಹಿನ್ನೆಲೆಯಲ್ಲಿ ಇದೇ ಫೆ.28 ರಂದು ಮಹಾ ಸಮ್ಮೇಳನ ಹಮ್ಮಿಕೊಳ್ಳಲಾಗಿದೆ ಎಂದು ಸಂಘದ ಜಿಲ್ಲಾಧ್ಯಕ್ಷ ರಮೇಶ್ ತಿಳಿಸಿದರು.

ಗುರು ಭವನದಲ್ಲಿ ಶನಿವಾರ ಆಯೋಜಿಸಿದ್ದ ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿ, ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘವು ಸ್ಥಾಪನೆಗೊಂಡು 55 ವಸಂತಗಳನ್ನು ಪೂರೈಸಿದೆ. ಈ ಹಿನ್ನೆಲೆಯಲ್ಲಿ ಫೆ.28 ರಂದು ಬೆಂಗಳೂರಿನ ಅರಮನೆ ಮೈದಾನದಲ್ಲಿ ರಾಜ್ಯಮಟ್ಟದ ಶೈಕ್ಷಣಿಕ ಮಹಾ ಸಮ್ಮೇಳನ, ಧನ್ಯತಾ ಸಮಾರಂಭ, ಸಂಘದ ಸುವರ್ಣ ಮಹೋತ್ಸವ ಹಾಗೂ ಗುರುವಂದನಾ ಸಮಾರಂಭವನ್ನು ಆಯೋಜಿಸಲಾಗಿದೆ ಎಂದು ಹೇಳಿದರು.

ಕರ್ನಾಟಕ ಪ್ರಾಥಮಿಕ ಶಿಕ್ಷಕರ ಸಮಸ್ಯೆಗಳನ್ನು ಪರಿಹರಿಸಿರುವ ಮಹಾಸಂಸ್ಥೆಯಾಗಿ ಹೊರಹೊಮ್ಮಿದೆ. ಶಿಕ್ಷಕರ ವೃಂದ ಮತ್ತು ನೇಮಕಾತಿ ತಿದ್ದುಪಡಿ, ಮುಖ್ಯಶಿಕ್ಷಕರಿಗೆ ಬಡ್ತಿ, ಶಾಲೆಗಳಿಗೆ ಉಚಿತ ವಿದ್ಯುತ್, ವೇತನ ಸಹಿತ ಋತುಚಕ್ರ ರಜೆ, ವ್ಯವಸ್ಥಿತ ವರ್ಗಾವಣೆ, ಉಚಿತ ಟ್ಯಾಕ್ಸ್ ಫಾರಂ ಸೌಲಭ್ಯ ಹೀಗೆ ಶಿಕ್ಷಕರಿಗೆ ನೆರವಾಗುವ ಹಲವಾರು ಕಾರ್ಯಗಳನ್ನು ಸಂಘ ಮಾಡಿದೆ ಎಂದರು.

ರಾಜ್ಯದಲ್ಲಿ ಒಟ್ಟು 1.47 ಲಕ್ಷ ಪ್ರಾಥಮಿಕ ಶಿಕ್ಷಕರನ್ನು ಸಂಘವು ಹೊಂದಿದೆ. ಸಂಘವು ನಮ್ಮ ಶಿಕ್ಷಕರ ಸಮಸ್ಯೆಗಳಿಗೆ ಹಾಗೂ ಸರ್ಕಾರದ ನಡುವೆ ಸೇತುವೆಯಾಗಿ ಕಾರ್ಯನಿರ್ವಹಿಸುತ್ತಿದೆ. ಸಮ್ಮೇಳನದಲ್ಲಿ ಶಿಕ್ಷಕರ ಇದುವರೆವಿಗೂ ಈಡೇರದೇ ಉಳಿದಿರುವ ಸಮಸ್ಯೆಗಳನ್ನು ಮಂಡಿಸಿ, ಜನಪ್ರತಿನಿಧಿಗಳ ಮೂಲಕ ಬಗೆಹರಿಸಿಕೊಳ್ಳಲಿದ್ದೇವೆ. ಸಂಘವು ಸಮತ್ವ, ಸಮನ್ವಯ, ಸಮಾನತೆ ಇವುಗಳನ್ನು ಒಳಗೊಂಡು ಸರ್ವರಿಗು ಸಮಬಾಳು; ಸರ್ವರಿಗೂ ಸಮಪಾಲು ಎಂಬ ತತ್ವದಡಿಯಲ್ಲಿ ಕೆಲಸ ಮಾಡುತ್ತಿದೆ ಎಂದು ತಿಳಿಸಿದರು.

ಅಪ್ರತಿಮ ಸೇವೆ ಸಲ್ಲಿಸಿರುವ ರಾಜ್ಯದ ಪ್ರತಿ ಜಿಲ್ಲೆಯಿಂದ ಇಬ್ಬರು ಒಬ್ಬ ಶಿಕ್ಷಕಿ, ಒಬ್ಬ ಶಿಕ್ಷಕರನ್ನು 'ಜ್ಯೋತಿ ಬಾಪುಲೆ' ಮತ್ತು 'ಸಾವಿತ್ರಿ ಬಾಪುಲೆ' ಇವರ ಹೆಸರಿನಲ್ಲಿ ಶಿಕ್ಷಕರಿಗೆ ಸನ್ಮಾನ ಹಮ್ಮಿಕೊಂಡಿದೆ. ಈ ಸಮಾರಂಭಕ್ಕೆ ರಾಜ್ಯದ ಪ್ರತಿ ಜಿಲ್ಲೆಯ ಶಿಕ್ಷಕರೂ ಭಾಗವಹಿಸಲಿದ್ದು, ನಮ್ಮ ಜಿಲ್ಲೆಯಿಂದ ಹೆಚ್ಚಿನ ಶಿಕ್ಷಕರು ಭಾಗವಹಿಸುವ ಮೂಲಕ ಸಮ್ಮೇಳನದ ಯಶಸ್ಸಿಗೆ ಭಾಗಿಯಾಗುವಂತೆ ಮನವಿ ಮಾಡಿದರು.

ಸಮಾರಂಭವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಉದ್ಘಾಟಿಸಲಿದ್ದಾರೆ. ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಸಚಿವ ಮಧು ಬಂಗಾರಪ್ಪ ಹಾಗೂ ಮುಖ್ಯ ಅತಿಥಿಗಳಾಗಿ ರಾಜ್ಯ ಸರ್ಕಾರದ ಸಚಿವರು, ಸಂಸದರು, ಶಾಸಕರು, ವಿಧಾನಪರಿಷತ್, ವಿಧಾನಸಭೆ ಸದಸ್ಯರು ಹಾಗೂ ಹಿರಿಯ ಅಧಿಕಾರಿಗಳು ಆಗಮಿಸಲಿದ್ದಾರೆ. ಸಂಘದ ರಾಜ್ಯಾಧ್ಯಕ್ಷ ಚಂದ್ರಶೇಖರ ನುಗ್ಗಲಿ, ಪ್ರಧಾನ ಕಾರ್ಯದರ್ಶಿ ಎಚ್. ಎಸ್.ಚೇತನ್, ಗೌರವಾಧ್ಯಕ್ಷ ಕೆ.ನಾಗೇಶ್ ನೇತೃತ್ವದಲ್ಲಿ ಸಮ್ಮೇಳನ ಜರುಗಲಿದೆ ಎಂದರು.

ಸುದ್ದಿಗೋಷ್ಠಿಯಲ್ಲಿ ಸಂಘದ ರಾಮನಗರ ತಾಲ್ಲೂಕು ಅಧ್ಯಕ್ಷೆ ರುದ್ರಾಣಮ್ಮ, ಪ್ರಧಾನ ಕಾರ್ಯದರ್ಶಿ ವಾಸುದೇವ್, ಚನ್ನಪಟ್ಟಣ ತಾಲ್ಲೂಕು ಕಾರ್ಯದರ್ಶಿ ಮಹದೇವ್ ಉಪಸ್ಥಿತರಿದ್ದರು.

## ಬ್ರಹ್ಮರಥೋತ್ಸವ

ತುಮಕೂರು ಗ್ರಾಮಾಂತರ ಶ್ರೀಕ್ಷೇತ್ರ ಅರಿಯೂರು ಶ್ರೀ ವೈದ್ಯ ನಾಥೇಶ್ವರಸ್ವಾಮಿಯ ಬ್ರಹ್ಮರಥೋತ್ಸವವು ಶಿವರಾತ್ರಿ ಹಬ್ಬದಂದು ವಿಜೃಂಭಣೆಯಿಂದ ನೆರವೇರಿತು. ಸಹಸ್ರಾರು ಭಕ್ತರು ಭಾಗವಹಿಸಿ ರಥಕ್ಕೆ ಬಾಳೆಹಣ್ಣು, ದವನ ಸಮರ್ಪಿಸಿದರು.



## ಪ್ರಪ್ರಥಮ ಬಾರಿಗೆ ಮಹಿಳಾ ಭಕ್ತೆಯರಿಂದ ರುದ್ರ ಪಾಠ ಹಾಗೂ ಚಮಕ ಪ್ರಶ್ನೆಯ ಪಠಣೆ

ಮಹಾಶಿವರಾತ್ರಿ ಪ್ರಯುಕ್ತ ಎಂದಿನಂತೆ ಶ್ರದ್ಧಾ, ಭಕ್ತಿಯಿಂದ ಕೂಡಿದ ಮಹಾಶಿವರಾತ್ರಿ ಕಾರ್ಯಕ್ರಮ ಶ್ರೀ ರಾಮಕೃಷ್ಣ ಸೇವ ಆಶ್ರಮದಲ್ಲಿ ನೆರವೇರಿತು. ತುಂಬಿದ ಪ್ರಾರ್ಥನಾಮಂದಿರದಲ್ಲಿ ಶ್ರೀ ಶಿವನ ಪೂಜೆ, ಬಿಲ್ವಾರ್ಚನೆ, ಸ್ಫಟಿಕಲಿಂಗದ ಅಭಿಷೇಕ ನೆರವೇರಿತು.



ಪ್ರಪ್ರಥಮ ಬಾರಿಗೆ ಮಹಿಳಾ ಭಕ್ತರಿಂದ ಶ್ರೀ ರುದ್ರಪಠಣ, ಶ್ರೀ ಚಮಕ ಪ್ರಶ್ನೆ ನೆರವೇರಿತು. ಬಹುಶಃ ಮಹಿಳಾ ಭಕ್ತರಿಂದ ವೇದಘೋಷ ನೆರವೇರಿದ್ದು ಇಡೀ ಪ್ರಪ್ರಥಮ ಎನ್ನಬಹುದು. ಪೂಜ್ಯ ಸ್ವಾಮಿ ಜಪಾನಂದಜಿ ಮಹಾರಾಜರು ಅನೇಕ ವರುಷಗಳಿಂದ ಪುರುಷರಿಗೆ ಶಾಸ್ತ್ರೋಕ್ತವಾಗಿ ಆಶ್ರಮದಲ್ಲಿ ವೇದಪಾಠ ತರಗತಿಗಳನ್ನು ಕಳೆದ 30 ವರುಷಗಳಿಂದಲೂ ನಡೆಸಿಕೊಂಡು ಬರುತ್ತಿರುವುದು ಎಲ್ಲರಿಗೂ ತಿಳಿದ ವಿಚಾರವೇ ಸರಿ. ಆದರೇ ಮಹಿಳಾ ಭಕ್ತರ ಶ್ರದ್ದೆ, ನಿಷ್ಠೆ ಹಾಗೂ ಉತ್ಸುಕತೆಯನ್ನೂ ಮತ್ತು ಆಸಕ್ತಿಯನ್ನೂ ಕಂಡ ಪೂಜ್ಯ ಸ್ವಾಮಿಜೀ ರವರು ಕಳೆದ ವರುಷದ ಶ್ರೀ ಶಿವರಾತ್ರಿಯಂದು ವೇದಪಾಠ ವನ್ನು ಮಹಿಳೆಯರಿಗಾಗಿ ಆರಂಭಿಸಿದ ಕಾರಣ ಇಂದು ಅತ್ಯಂತ ಸುಲಲಿತವಾಗಿ ಶ್ರೀ ಶ್ರೀ ರುದ್ರ ಮತ್ತು ಚಮಕ ಪ್ರಶ್ನೆ ಪ್ರಪ್ರಥಮ ಬಾರಿಗೆ ಮಹಿಳಾ ಭಕ್ತರು ನಿಷ್ಠೆ ಹಾಗೂ ಶ್ರದ್ಧಾ ಭಕ್ತಿಯಿಂದ ಸ್ಪಷ್ಟವಾಗಿ ಉಚ್ಚರಿಸುತ್ತ ಉದಾತ, ಅನುದಾತಗಳನ್ನು ಉಚ್ಚರಿಸುತ್ತಿದ್ದರೆ ಹಿಂದೂ ಧರ್ಮದ ಪರಂಪರೆಯನ್ನು, ಸಂಸ್ಕೃತಿ, ಸಂಸ್ಕಾರವನ್ನು, ಸಂಪ್ರದಾಯವನ್ನು ರಕ್ಷಿಸಿಕೊಳ್ಳಲು ಅಹರ್ನಿಷಿ ಶ್ರಮಿಸುತ್ತಿರುವ ಪೂಜ್ಯ ಸ್ವಾಮಿ ಜಪಾನಂದಜಿ ಮಹಾರಾಜರಿಗೆ ಸಂತೋಷವನ್ನು ತಂದೊಡ್ಡಿಟ್ಟಿತು ಎನ್ನಬಹುದು.

ಪೂಜ್ಯ ಸ್ವಾಮಿ ಜಪಾನಂದಜಿ ಮಹಾರಾಜರ ನೇತೃತ್ವದಲ್ಲಿ ನಡೆದ ಶ್ರೀ ಶಿವನಾಮ ಸಂಕೀರ್ತನೇಯಂತೂ ಕೈಲಾಸವೇ ಪರವೇಶ್ವರನೊಂದಿಗೆ ಧರೆಗೆ ಇಳಿದಂತಿತ್ತು. ಈ ಸಂಧರ್ಭದಲ್ಲಿ ಶ್ರೀ ಶಂಕರಾಚಾರ್ಯ, ಶ್ರೀ ವೇದವ್ಯಾಸ, ತುಳಸಿದಾಸ, ಅಣ್ಣ ಬಸವಣ್ಣ ವಚನಗಳು, ಹೀಗೆ ಪುಂಖಾನು ಪುಂಖವಾಗಿ ಗಾನ ಲಹರಿ ಹರಿದು ಬರುತ್ತಿತ್ತು. ಪೂಜ್ಯ ಸ್ವಾಮಿ ಜಪಾನಂದಜಿ ಮಹಾರಾಜರ ಸುಶ್ರಾವ್ಯ ಕಂಠಸಿರಿಯಿಂದ ಸುಮಾರು 3–30ಘಂಟೆಯಷ್ಟು ನಾದಮಾಧುರ್ಯ ಮೂಡಿಬರುತ್ತಿತ್ತು. ನೆರೆದ ಭಕ್ತಸಮೂಹ ಕೈಲಾಸದಲ್ಲಿ ಪರಮೇಶ್ವನ ಸಾನಿಧ್ಯದಲ್ಲಿರುವಂತೆ ಅನುಭವವಾಯಿತು ಎನ್ನಬಹುದುದು. ಈಶ್ವರ ಸುಂದರ ಅಲಂಕಾರ, ಧೂಪ, ದೀಪಗಳ ಸೊಬಗು ಭಕ್ತರ ಸುಂದರ ಸಾಮೂಹಿಕ ಕೀರ್ತನೆ ನಿಜಕ್ಕೂ ಭಕ್ತಿಯ ಸಾಗರದಲ್ಲಿ ಆನಂದಿಸಿ ಪುನೀತರಾಗುವಂತೆ ಇತ್ತು ಆ ಪ್ರಾರ್ಥನಾಮಂದಿರ. ಏತನ್ಮಧ್ಯೆ ಸುಂದರ ಅಲಂಕಾರ, ಪೂಜಾ ವಿಧಿವಿಧಾನ, ಪರಮೇಶ್ವರನ ಅಲಂಕಾರ ನಿಜಕ್ಕೂ ಆಧ್ಯಾತ್ಮಿಕ ಅನುಭವಾಮೃತದ ಸವಿಯನ್ನು ಉಂಡಂತಾಯಿತು. ಈ ಕಾರ್ಯಕ್ರಮಕ್ಕೆ ಪುಟವಿಟ್ಟಂತೆ ಪೂಜ್ಯ ಸ್ವಾಮಿ ಜಪಾನಂದಜಿ ಮಹಾರಾಜರು ತಮ್ಮ ಸಿರಿಕಂಠದೊಂದಿಗೆ ಅನೇಕ ಶಿವನಾಮ ಸ್ತೋತ್ರ, ಹಾಡುಗಳು, ವಚನಗಳನ್ನು ಭಕ್ತಿಯಿಂದ ಪರಮೇಶ್ವರನ ಚರಣಕಮಲಗಳಿಗೆ ಸಮರ್ಪಿಸಿದ ಭಕ್ತಿಕುಸುಮಾಂಜಲಿ ಇದಾಗಿತ್ತು. ಒಟ್ಟಿನಲ್ಲಿ ಭಕ್ತಿ ಶ್ರದ್ಧಾ ಮತ್ತು ಸಮರ್ಪಣಾ ಭಾವದಿಂದ ಕೂಡಿದ ಶಿವರಾತ್ರಿ ಎನ್ನಬಹುದಾಗಿತ್ತು.

ಈ ವಿಶೇಷ ಕಾರ್ಯಕ್ರಮಕ್ಕೆ ಬೆಂಗಳೂರಿನ ತಬಲಾ ವಿದ್ವಾನ್ ಶ್ರೀ ದತ್ತಕುಮಾರ, ಹಾಗೂ ಸ್ಥಳೀಯ ಕಲಾವಿದ ಸಂದೀಪ್, ಭರತ್, ರೋಹಿತ್ ಮುಂತಾದವರು ಭಾಗವಹಿಸಿದರು. ಈ ಕಾರ್ಯಕ್ರಮ ಆನ್–ಲೈನ್ ನಲ್ಲಿ ಎಂದಿನಂತೆ ಪ್ರಸಾರವಾಗಿತ್ತು. ಸಾವಿರಾರು ಶ್ರದ್ಧಾವಂತ ಭಕ್ತರು ಈ ಕಾರ್ಯಕ್ರಮವನ್ನು ವೀಕ್ಷಿಸಿದ್ದಾರೆ.

## ಹೊಳಕಲ್ಲು ಶಾಲೆಗೆ ಶತಮಾನೋತ್ಸವ ಸಂಭ್ರಮ

### 22ರಂದು ಆಚರಣೆ: ನೂತನ ಕೊಠಡಿಗಳಿಗೆ ಶಂಕುಸ್ಥಾಪನೆ

ತುಮಕೂರು: ಸರ್ಕಾರಿ ಶಾಲೆಗಳು ಮುಚ್ಚಿಹೋಗುತ್ತಿವೆ ಎನ್ನುವ ಆತಂಕ ಕಾಲದಲ್ಲಿ ತಾಲ್ಲೂಕಿನ ಗೂಳೂರು ಹೋಬಳಿ ಹೊಳಕಲ್ಲು ಗ್ರಾಮದ ಸರ್ಕಾರಿ ಪ್ರಾಥಮಿಕ ಶಾಲೆ ಶತಮಾನೋತ್ಸವದ ಸಂಭ್ರಮ ಆಚರಿಸಿಕೊಳ್ಳುತ್ತಿದೆ. 1925ರಲ್ಲಿ ಆರಂಭವಾದ ಈ ಶಾಲೆ ನೂರು ವರ್ಷ ಪೂರೈಸಿದೆ. ಈ ಶಾಲೆಯಲ್ಲಿ ಶಿಕ್ಷಣ ಪಡೆದ ಸಹಸ್ರಾರು ಮಂದಿ ತಮ್ಮ ಬದುಕು ರೂಪಿಸಿಕೊಂಡಿದ್ದಾರೆ. ಶಾಲೆಯ ಹಳೆ ವಿದ್ಯಾರ್ಥಿಗಳು ಅಕ್ಷರ ಕಲಿಸಿದ ಶಾಲೆಯ ಶತಮಾನೋತ್ಸವವನ್ನು ಊರಿನ ಹಬ್ಬದಂತೆ ಆಚರಣೆ ಮಾಡುತ್ತಿದ್ದಾರೆ.

ಈ ತಿಂಗಳ 22ರಂದು ಬೆಳಿಗ್ಗೆ 11 ಗಂಟೆಗೆ ಹೊಳಕಲ್ಲು ಸರ್ಕಾರಿ ಶಾಲೆಯಲ್ಲಿ ಶತಮಾನೋತ್ಸವ ಸಮಾರಂಭ ಹಾಗೂ ಸರ್ಕಾರಿ ಹಿರಿಯ ಪ್ರಾಥಮಿಕ ಪಾಠ ಶಾಲೆಯ ನೂತನ ಕೊಠಡಿಗಳ ಶಂಕುಸ್ಥಾಪನಾ ಸಮಾರಂಭ ಏರ್ಪಾಟಾಗಿದೆ. ಸಿದ್ಧಗಂಗಾ ಮಠದ ಶಿವಸಿದ್ದೇಶ್ವರ ಸ್ವಾಮೀಜಿಗಳ ದಿವ್ಯ ಸಾನಿಧ್ಯದ ಈ ಸಮಾರಂಭವನ್ನು ಕೇಂದ್ರ ಜಲಶಕ್ತಿ ಮತ್ತು ರೈಲ್ವೆ ಖಾತೆ ರಾಜ್ಯ ಸಚಿವ ವಿ.ಸೋಮಣ್ಣ ಉದ್ಘಾಟಿಸುವರು. ಶಾಸಕ ಬಿ.ಸುರೇಶ್‌ಗೌಡರ ಅಧ್ಯಕ್ಷತೆಯಲ್ಲಿ ಶಿಕ್ಷಣ ತಜ್ಞ ಗುರುರಾಜ್ ಕರ್ಜಗಿ, ಡಿಡಿಪಿಐ ರಘುಚಂದ್ರ, ಕ್ಷೇತ್ರ ಶಿಕ್ಷಣಾಧಿಕಾರಿ ಹನುಮಂತಪ್ಪ ಮೊದಲಾದವರು ಭಾಗವಹಿಸುವರು.




ತಾವು ಓದಿದ ಹೊಳಕಲ್ಲು ಸರ್ಕಾರಿ ಶಾಲೆಯ ಬಗ್ಗೆ ಹಳೆ ವಿದ್ಯಾರ್ಥಿಗಳಿಗೆ ಅಪಾರ ಅಭಿಮಾನ. ಶಾಲೆ ಎಂದರೆ ಕೇವಲ ಅಕ್ಷರ ಕಲಿಸುವುದಷ್ಟೇ ಅಲ್ಲ, ಆ ಮೂಲಕ ವ್ಯಕ್ತಿತ್ವ ನಿರ್ಮಾಣ, ಉತ್ತಮ ಬದುಕು ರೂಪಿಸಿಕೊಳ್ಳಲು ನೆರವಾಗುತ್ತದೆ. ಜಾತಿ, ಧರ್ಮ, ಲಿಂಗ ಭೇದವಿಲ್ಲದೆ ಎಲ್ಲಾ ಮಕ್ಕಳು ಒಟ್ಟಾಗಿ ಕಲಿಯುವ ನಲಿಯುವ ಭಾವೈಕ್ಯತೆಯ ತಾಣವಾಗುವುದು ಶಾಲೆಯೊಂದರ ಹಿರಿಮೆ ಎಂದು ಶಾಲೆಯ ಹಳೆ ವಿದ್ಯಾರ್ಥಿಯೂ ಆಗಿರುವ ಹೊಳಕಲ್ಲು ಗ್ರಾಮ ಪಂಚಾಯ್ತಿ ಮಾಜಿ ಅಧ್ಯಕ್ಷ ಹೆಚ್.ಎ.ಆಂಜನಪ್ಪ ಹೇಳಿದರು.

ಶಿಕ್ಷಣ ಕ್ಷೇತ್ರದ ಬಗ್ಗೆ ಹೆಚ್ಚು ಕಾಳಜಿವಹಿಸಿರುವ ಶಾಸಕ ಬಿ.ಸುರೇಶ್‌ಗೌಡರು ಕ್ಷೇತ್ರದ ಶಾಲಾಕಾಲೇಜುಗಳನ್ನು ಮಾದರಿಯಾಗಿ ನಿರ್ಮಾಣಮಾಡಲು ಕಾಳಜಿವಹಿಸಿದ್ದಾರೆ. ಹೊಳಕಲ್ಲು ಶಾಲೆಗೂ ಸುಸಜ್ಜಿತ ಕೊಠಡಿಗಳನ್ನು ನಿರ್ಮಿಸಿಕೊಡುತ್ತಿದ್ದಾರೆ ಎಂದು ಹೇಳಿದರು.

## ಸಿದ್ಧಗಂಗೆಯಲ್ಲಿ ಕಬಡ್ಡಿ ಕಲರವ: 3 ದಿನಗಳ ಕಬಡ್ಡಿ ಜಾತ್ರೆ :ಸಿದ್ಧಲಿಂಗ ಸ್ವಾಮೀಜಿ ಕಬಡ್ಡಿ ಜಾತ್ರೆಗೆ ಚಾಲನೆ

ತುಮಕೂರು: ಸಿದ್ಧಗಂಗಾ ಮಠದ ಸಿದ್ಧಲಿಂಗೇಶ್ವರ ಜಾತ್ರೆ ಪ್ರಯುಕ್ತ ಮಠದಲ್ಲಿ ನಡೆದಿರುವ ಮೂರು ದಿನಗಳ ನಗರದ ಹೊನಲು ಬೆಳಕಿನ ರಾಜ್ಯ ಮಟ್ಟದ ಕಬಡ್ಡಿ ಪಂದ್ಯಾವಳಿಯಲ್ಲಿ ರಾಜ್ಯದ ವಿವಿಧ ಜಿಲ್ಲೆಗಳ ಪ್ರತಿಷ್ಠಿತ ತಂಡಗಳು ಪಾಲ್ಗೊಂಡು ರೋಚಕ ಪ್ರದರ್ಶನ ನೀಡಿ ಕ್ರೀಡಾಪ್ರೇಮಿಗಳನ್ನು ಮನಸ್ಸನು ಮುದಗೊಳಿಸಿವೆ.

ಸಿದ್ಧಗಂಗಾ ಜಾತ್ರೆಯ ವಿವಿಧ ಆಚರಣೆ, ಕಾರ್ಯಕ್ರಮಗಳ ಜೊತೆಗೆ ಕಬಡ್ಡಿ ಜಾತ್ರೆಯೂ ಮಠಕ್ಕೆ ಬರುವ ಸಹಸ್ರಾರು ಭಕ್ತರನ್ನು ಆಕರ್ಷಿಸಿ ಸಂಭ್ರಮ ಹೆಚ್ಚಿಸಿದೆ. ಜಿಲ್ಲಾ ಅಮೆಚೂರ್ ಕಬಡ್ಡಿ ಅಸೋಸಿಯೇಷನ್ ಸಹಕಾರದಲ್ಲಿ ಸಿದ್ಧಗಂಗಾ ಸ್ಪೋರ್ಟ್ಸ್ ಅಸೋಸಿಯೇಷನ್ ಈ ಪಂದ್ಯಾವಳಿ ಆಯೋಜಿಸಿದೆ. ಮೊದಲ ದಿನ ಸಿದ್ಧಗಂಗಾ ಮಠಾಧ್ಯಕ್ಷರಾದ ಸಿದ್ಧಲಿಂಗ ಸ್ವಾಮೀಜಿ ಕಬಡ್ಡಿ ಜಾತ್ರೆಗೆ ಚಾಲನೆ ನೀಡಿ ಶುಭ ಕೋರಿದರು.

20 ಪುರುಷ ಹಾಗೂ 4 ಮಹಿಳಾ ತಂಡಗಳು ಕಬಡ್ಡಿ ಪಂದ್ಯಾವಳಿಯಲ್ಲಿ ಸೆಣೆಸಾಟ ನಡೆಸಿವೆ. ಅಂತಾರಾಷ್ಟ್ರೀಯ ಗುಣಮಟ್ಟದ ಅಂಕಣದಲ್ಲಿ ನಡೆದಿರುವ ಕಬಡ್ಡಿ ಪಂದ್ಯಾವಳಿಯನ್ನು ಪ್ರತಿದಿನ ಸಾವಿರಾರು ಕ್ರೀಡಾಭಿಮಾನಿಗಳು ವೀಕ್ಷಿಸಿ ಸಂಭ್ರಮಿಸುತ್ತಿದ್ದಾರೆ. ಪಂದ್ಯಗಳ ರೋಚಕರೆಯನ್ನು ಕಣ್ತುಂಬಿಕೊಳ್ಳಲು ಪ್ರೇಕ್ಷಕರ ಅನುಕೂಲಕ್ಕಾಗಿ ವ್ಯವಸ್ಥಿತ ಗ್ಯಾಲರಿ ಸಿದ್ಧಪಡಿಸಲಾಗಿದೆ.



ಎರಡನೇ ದಿನವಾದ ಶನಿವಾರ ಸಿದ್ಧಗಂಗಾ ಸ್ಪೋರ್ಟ್ಸ್ ಅಸೋಸಿಯೇಷನ್‌ನಿಂದ ಹಿರಿಯ ಕಬಡ್ಡಿ ಆಟಗಾರರಾದ ಮುನಿರಾಜು ಹಾಗೂ ನಟರಾಜು ಅವರಿಗೆ ಸಿದ್ಧಗಂಗಾ ಕ್ರೀಡಾರತ್ನ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಸಂಪಾದಕ ಡಾ.ಎಸ್.ನಾಗಣ್ಣ ಕಾರ್ಯಕ್ರಮದ ಮುಖ್ಯ ಅತಿಥಿಯಾಗಿ ಆಗಮಿಸಿ ಅಂದಿನ ಕಬಡ್ಡಿ ಪಂದ್ಯಾವಳಿಗಳಿಗೆ ಚಾಲನೆ ನೀಡಿದರು. ಗ್ರಾಮೀಣ ಕ್ರೀಡೆಯಾದ ಕಬಡ್ಡಿ ನಮ್ಮ ಹಿರಿಮೆ. ಹಳ್ಳಿ ಹಳ್ಳಿಗಳಲ್ಲೂ ಕಬಡ್ಡಿ ಪ್ರತಿಭೆಗಳಿವೆ. ಅಂತಹವರನ್ನು ಗುರುತಿಸಿ ಬೆಳಕಿಗೆ ತರಲು ಹಾಗೂ ಅವರು ಅಂತಾರಾಷ್ಟ್ರೀಯ ಮಟ್ಟದಲ್ಲಿ ದೇಶವನ್ನು ಪ್ರತಿನಿಧಿಸಲು ಇಂತಹ ಪಂದ್ಯಾವಳಿಗಳು ವೇದಿಕೆಯಾಗಲಿವೆ ಎಂದು ಹೇಳಿದರು.

ಸಿದ್ಧಗಂಗಾ ಸ್ಪೋರ್ಟ್ಸ್ ಅಸೋಸಿಯೇಷನ್ ಗೌರವಾಧ್ಯಕ್ಷ ಹೆಚ್.ಎನ್.ದೀಪಕ್, ಜಿಲ್ಲಾ ಅಮೆಚೂರ್ ಕಬಡ್ಡಿ ಅಸೋಸಿಯೇಷನ್ ಅಧ್ಯಕ್ಷ ಕೆ.ಆರ್.ರವೀಂದ್ರ, ಜಂಟಿ ಕಾರ್ಯದರ್ಶಿ ಮುನಿರಾಜು, ನಿರ್ದೇಶಕ ರಮೇಶ್, ಹಲವಾರು ಮಂದಿ ಹಿರಿಯ ಕಬಡ್ಡಿ ಆಟಗಾರರು, ಕನ್ನಡಪರ ಸಂಘಟನೆಗಳ ಒಕ್ಕೂಟ ಅಧ್ಯಕ್ಷ ಶಂಕರ್, ವಿಜಯಸೇನೆ ರಾಜ್ಯ ಕಾರ್ಯದರ್ಶಿ ರಂಜನ್, ಚಕ್ರವರ್ತಿ ಪ್ರಕಾಶ್, ಸಿದ್ಧಗಂಗಾ ಸ್ಪೋಟ್ಸ್ ಅಸೋಸಿಯೇಷನ್ ಅಧ್ಯಕ್ಷ ಆರ್.ಎಸ್.ವಿರೂಪಾಕ್ಷಯ್ಯ, ಉಪಾಧ್ಯಕ್ಷರಾದ ಕೆ.ಆರ್.ಸತೀಶ್, ಆರ್.ಗುರುಪ್ರಸಾದ್, ಆರ್.ಎಸ್.ಸೋಮಶೇಖರ್, ಬಿ.ಸಿ.ಮಲ್ಲಿಕಾರ್ಜುನ್, ಆರ್.ಹೆಚ್.ಶಿವಕುಮಾರ್, ಹೆಚ್.ಜಿ.ಮಂಜುನಾಥ್, ಪ್ರಧಾನ ಕಾರ್ಯದರ್ಶಿ ಎಂ.ಪಿ.ಉಮಾಶಂಕರ್, ಕಾರ್ಯದರ್ಶಿ ಆರ್.ಎಂ.ಸಿದ್ಧರಾಜು, ಖಜಾಂಚಿ ಎ.ಜಿ.ಹರೀಶ್ ಹಾಗೂ ನಿರ್ದೇಶಕರು ಅಲ್ಲದೆ ವಿವಿಧ ಕ್ರೀಡಾ ಸಂಸ್ಥೆಗಳ ಪ್ರಮುಖರು ಭಾಗವಹಿಸಿದ್ದರು.



